ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 29 ಜುಲೈ 19, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಕಾರ್ಮಿಕರು ಧಿಕ್ಕರಿಸಿದ ಬೆಂಗಳೂರು ಬಂದ್

– ಕಾ|| ಸೂರ್ಯನಾರಾಯಣರಾವ್

ಕಾಂಗ್ರೆ ಪಕ್ಷ ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಲು ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಉತ್ಪಾದನೆಗೆ ಒಂದಿಷ್ಟು ಹಾನಿಯಾಗದ ಈ ಬಂದ್ ಅನ್ನು ಜನ ತಿರಸ್ಕರಿಸಿದ್ದಾರೆ.

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್(ಐ) ರಾಜೀವ್‌ಗಾಂಧಿಯವರ ದಿವಾಳಿಕೋರತನವೇ ದೇಶದ ಆರ್ಥಿಕ ಪರಿಸ್ಥಿತಿ ಹದಗೆಡಲು ಕಾರಣವಾಗಿರುವುದನ್ನು ಬೊಫೋರ್ಸ್‌ಗನ್, ಸಬ್‌ಮೆರಿನ್, ಫೇರ್‌ಪಾಕ್ಸ್ ಹಗರಣಗಳಲ್ಲಿ ತಮ್ಮ ಪಕ್ಷದ ಘಟಾನುಘಟಿಗಳೇ ಸಿಕ್ಕಿ ಜನ ನಂಬದಂತಹ ಪರಿಸ್ಥಿತಿಗೆ ಈಡಾಗಿರುವುದನ್ನು ಮರೆಮಾಚಲು, ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸಲು 'ಬಂದ್'ನಂತಹ ಕಾರ್ಯಕ್ರಮಗಳನ್ನು ಹಾಕುತ್ತಿದೆ. ದಿನದಿನವೂ ಅದರ ನಾಯಕರು ಪತ್ರಿಕೆಗಳಲ್ಲಿ ಬೊಬ್ಬೆಹೊಡೆಯುತ್ತಿದ್ದಾರೆ ಎಂದಿದ್ದಾರೆ - ಕಾ|| ಸೂರ್ಯನಾರಾಯಣರಾವ್.

ಕಾಂಗ್ರೆಸ್‌ನ ಆರ್ಥಿಕ ನೀತಿಗಳೇ ಜನತಾ ಸರ್ಕಾರದ ಆರ್ಥಿಕ ನೀತಿಯಂತೆಯೇ ಬೆಲೆ ಏರಿಕೆಗೆ ಕಾರಣವಾಗಿರುವುದನ್ನು ಮನಗಂಡ ಕಾರ್ಮಿಕ ವರ್ಗ ಕಾಂಗ್ರೆ ಪಕ್ಷದ ಬಂದ್ ಕರೆಯನ್ನು ಧಿಕ್ಕರಿಸಿದೆ. ಈ ಬಂದ್‌ನಲ್ಲಿ ಯಾವುದೇ ಸಾರ್ವಜನಿಕ ಕ್ಷೇತ್ರದ – ಖಾಸಗೀ ಕ್ಷೇತ್ರದ ಕೈಗಾರಿಕೆಗಳ ಕಾರ್ಮಿಕರು ಭಾಗವಹಿಸದಿರುವುದು ಕಾರ್ಮಿಕ ವರ್ಗದ ಮೇಲೆ ಕಾಂಗ್ರೆಗೆ ವರ್ಚಸ್ಸಿಲ್ಲ ಎಂಬುದನ್ನು ಸಾಬೀತು ಪಡಿಸಿದೆ.

ಬೆಲೆ ಏರಿಕೆಯ ಬಗ್ಗೆ ಜನತೆಯಲ್ಲಿದ್ದ ಅತೃಪ್ತಿಯನ್ನು ಉಪಯೋಗಿಸಿಕೊಳ್ಳುವುದಲ್ಲದೆ ರಾಜಕೀಯ ಒತ್ತಡವನ್ನು ತಂದು ವ್ಯಾಪಾರಿಗಳ ಹಾಗೂ ರೆಗ್ಯುಲೇಟೆಡ್ ಮಾರ್ಕೆಟ್‌ನ ಅಂಗಡಿಗಳು ಮುಚ್ಚುವಂತೆ ಮಾಡಿದೆ. ಇದು ಕಾಂಗ್ರೆಸ್‌ನ ಬಗ್ಗೆ ಜನರಿಗೆ ಇರುವ ಭಾವನೆಯನ್ನು ಹೊರಗೆಡಹುತ್ತದೆ ಎಂದು ಕಾ| ಸೂರಿ ಹೇಳಿದರು.

ಆದರೆ ಜನತಾ ಸರ್ಕಾರ ಬಂದ್ ಸಂಪೂರ್ಣವಾಗಲಿಲ್ಲ, ಆದುದರಿಂದ ಜನತೆ ಜನತಾ ಸರ್ಕಾರದ ಬೆಲೆ ಏರಿಕೆ ನೀತಿಗೆ ಬೆಂಬಲಿಸಿದೆ ಎಂಬ ಭ್ರಮೆಯಲ್ಲಿ ಮುಳುಗಿದರೆ ಅದಕ್ಕೇ ಅಪಾಯ. ಜನಾಭಿಪ್ರಾಯಕ್ಕೆ ಜನತಾ ಸರ್ಕಾರ ಮಣಿಯುತ್ತದೆ ಎಂಬುದನ್ನು ತೋರಿಸಬೇಕು ಎಂದರು.

ಸಿ.ಪಿ.ಐ.(ಎಂ)ಹಾಗೂ ಸಿ.ಪಿ.ಐ.ನ ಒತ್ತಡಕ್ಕೆ ಮಣಿದು ಜನತಾ ಸರ್ಕಾರ ಒಂದು ತಜ್ಞರ ಸಮಿತಿ ರಚಿಸುವುದು ಸ್ವಾಗತಾರ್ಹ. ಆದರೆ ಆ ವರದಿ ಬರುವವರೆಗೆ ಏರಿಸಿದ ವಿದ್ಯುತ್ ದರಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಾಂಗ್ರೆ ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಮಣಿಯುವ ನೀತಿಯಿಂದಲೇ ಈ ಬೆಲೆ ಏರಿಕೆ ಉದ್ಭವಿಸಿದೆ ಎಂಬುದನ್ನು ಜನತೆ ಅರಿತಿದೆ. ಕಾಂಗ್ರೆಸ್(ಐ) ಆರ್ಥಿಕ ನೀತಿಗೆ, ಜನತಾದ ಆರ್ಥಿಕ ಧೋರಣೆಗೆ ಪರ್ಯಾಯವಾದ ದುಡಿಯುವ ಜನರೆಲ್ಲರಿಗೂ ಅನುಕೂಲಕರವಾದ ನೀತಿಯನ್ನು ರೂಪಿಸಿರುವ ಎಡಶಕ್ತಿಗಳನ್ನು ಜನತೆ ಬೆಳೆಸಬೇಕೆಂದು ಕಾಂ.ಸೂರ್ಯನಾರಾಯಣರಾವ್ ಕರೆ ನೀಡಿದರು.

ವಿಧಾನ ಮಂಡಲ ಅಧಿವೇಶನ ಮುಂದೂಡಿಕೆ

ವಿದ್ಯುತ್‌ದರ, ಹಾಲಿನದರ, ಹೋಟೆಲ್ ತಿಂಡಿಗಳ ಬೆಲೆಏರಿಕೆಯ ಬಗ್ಗೆ ಜನತೆ ತಳಮಳಕ್ಕೀಡಾಗಿರುವಾಗ ಅದನ್ನು ವಿಧಾನಸಭೆಯ ಪ್ರಜಾಸತ್ತಾತ್ಮಕ ವೇದಿಕೆಯಲ್ಲಿ ಚರ್ಚೆಯಾಗಲು ಅವಕಾಶವಾಗಲಿಲ್ಲ. ಕೇವಲ ಶ್ರದ್ಧಾಂಜಲಿಸಲ್ಲಸುವುದಕ್ಕೆ, ವಿಧಾನ ಪರಿಷತ್ ಸಭಾಪತಿ ವಿಧಾನಸಭೆಯ ಉಪಸ್ಪೀಕರ್‌ರನ್ನು ಆರಿಸುವುದಕ್ಕಾಗಿ ವಿಧಾನಸಭೆ ಕರೆದು ಅದನ್ನು ಮಾಡದೆಯೇ ವಿಧಾನಮಂಡಲದ ಎರಡೂ ಸದನಗಳ ಅಧಿವೇಶನವನ್ನು ಮುಂದೂಡಿರುವುದು ಈ ಸದನಗಳನ್ನು ಅಪಹಾಸ್ಯಕ್ಕೀಡು ಮಾಡಿದಂತೆಯೇ ಸರಿ.

ಯಾರು ಸಭಾಪತಿಗಳಾಗಬೇಕು, ಉಪ ಸ್ಪೀಕರ್‌ರಾಗಬೇಕು ಎಂಬ ಬಗ್ಗೆ ತಮ್ಮ ಪಕ್ಷದೊಳಗಿನ ಆಂತರಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಪ್ರಜಾಸತ್ತೆಗೆ ಪೆಟ್ಟು ಹಾಕಿದ್ದು ಖಂಡನೀಯ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಮಂಡಲದ ಸದಸ್ಯ ಕಾ||ಸೂರಿ ತಿಳಿಸಿದ್ದಾರೆ.

ತಡವಾಗಿ ಎಚ್ಚರಗೊಳ್ಳುತ್ತಿರುವ ಮುಖ್ಯಮಂತ್ರಿಗಳು

ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ತಡವಾಗಿಯಾದರೂ ಎಚ್ಚರ ಗೊಂಡಂತೆ ಕಂಡು ಬರುತ್ತದೆ. ಎಚ್ಚರಗೊಂಡ ರೀತಿ ಮಾತ್ರ ಉದ್ದೇಶ ಸಾಧನೆಗೆ ಸಹಾಯಕವಾದೀತೆಂದು ಅರ್ಥೈಸಿದರೆ ತಪ್ಪಾದೀತು.

ನಾಲ್ಕೂವರೆ ವರ್ಷಗಳ ತಮ್ಮ ಅಧಿಕಾರ ಚಲಾವಣೆಯ ನಂತರ ತಮ್ಮ ಆಡಳಿತೆಯಲ್ಲಿ ಕೆಳಮಟ್ಟದಿಂದ ಮೇಲ್ಮಟ್ಟದವರೆಗೂ ಭ್ರಷ್ಟಾಚಾರ, ಅದಕ್ಷತೆ ಲಂಚ ನೆಲೆ ಊರಿ ನಿಂತಿದೆಂದೂ, ವಿಲೇವಾರಿಯಾಗದ ಕಡಿತಗಳ ಸಂಖ್ಯೆ ಹೆಚ್ಚುತ್ತಿದೆಂದೂ ರಾಮಕೃಷ್ಣ ಹೆಗಡೆಯವರಿಗೆ ಗೋಚರಿಸಲು ಪ್ರಾರಂಭವಾಗಿದೆ.

ಹೋದ ವರ್ಷ 30 ಸಾವಿರದಷ್ಟಿದ್ದ ಕಡಿತ ಈ ವರ್ಷ 45 ಸಾವಿರದಷ್ಟಾಗಿವೆ. ಕಡತಗಳ ಬಾಕಿ ಉಳಿಯುವಿಕೆ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುತ್ತದೆಂಬ ಸತ್ಯಾಂಶವನ್ನು ಮುಖ್ಯಮಂತ್ರಿಯವರು ನೆನಪಿಸಿಕೊಟ್ಟದ್ದಾರೆ. ಆದರೆ ಕಡತಗಳ ವಿಲೇವಾರಿ ಸಕಾಲದಲ್ಲಿ ಯಾಕೆ ಆಗುತ್ತಿಲ್ಲ, ಅದಕ್ಕೆ ಅಡ್ಡಿ ಏನು ಎಂಬುದನ್ನು ಕಂಡು ಹಿಡಿಯಲು ಯಾವ ಮಂತ್ರಿ ಕೂಡ ಪ್ರಯತ್ನಿಸಿಲ್ಲ.

ರಾಜ್ಯ ಸರಕಾರದ ಅತ್ಯುನ್ನತ ಅಧಿಕಾರಿಗಳಿಗೆ ಮುಖ್ಯಮಂತ್ರಿಯವರು

ಎನ್. ಕೆ. ಉಪಾಧ್ಯಾಯ

ಬರೆದ ಪತ್ರದಿಂದಾಗಿ ಅಧಿಕಾರಿಗಳಲ್ಲಿ ಅಸಮಾಧಾನ ಉಂಟಾಗಿದೆಯಂತೆ. ಅದು ಸಹಜವೇ ಸರಿ. ಭ್ರಷ್ಟಾಚಾರ, ಲಂಚಗಳೆಲ್ಲ ಮಂತ್ರಿಗಳಿಂದ ಹಿಡಿದು ಕೆಳ ಮಟ್ಟದವರೆಗೂ ಆಳವಾಗಿ ಬೇರೂರಿದೆ. ಆದರೆ ಜನತಾ ಮಂತ್ರಿಗಳು ತಮ್ಮ ನಡತೆಯನ್ನು ತಿದ್ದಿಕೊಂಡರೆ ಕೆಳ ಮಟ್ಟದ ಭ್ರಷ್ಟಾಚಾರಕ್ಕೆ ಸ್ವಲ್ಪ ತಡೆಹಾಕಲು ಸಾಧ್ಯವಾಗಬಹುದು. ...ಸೀ ಹಲವಾರು ಉದಾಹರಣೆಗಳನ್ನು ಕೊಡಬಲ್ಲೆ. ಬಿಜಾಪುರ ನಗರಸಭೆಯ ಭ್ರಷ್ಟ ಅಧಿಕಾರಿಗಳನ್ನು ಬದ್ಲಿ ಮಾಡಬೇಕೆಂದು ಜಿಲ್ಲಾಧಿಕಾರಿ ಶಿಫಾರಸು ಮಾಡಿದರೂ ಕೂಡ ಮೇಲ್ಮಟ್ಟದಲ್ಲಿ ಅದು ತಡೆಹಿಡಿಯಲ್ಪಟ್ಟದೆ. ಮುಖ್ಯಮಂತ್ರಿಯವರು ಸ್ವತ: ಪ್ರಭಾವಕ್ಕೆ ಬಲಿಯಾಗಿಯೋ ಅಥವಾ ಮತ್ತಾವ ಕಾರಣದಿಂದಲೋ ನಾಲ್ಕೈದು ತಿಂಗಳೊಳಗಾಗಿಯೇ ಬದ್ಲಿಹುಕುಂ ಮಾಡಿಸುತ್ತಾರೆ. ಆದರೆ ನಿಜವಾಗಿಯೂ ಅನ್ಯಾಯವಾಗಿರುವವರ ಕುರಿತು ಯಾವ ಮಂತ್ರಿಯೂ ವಿಚಾರಿಸುತ್ತಿಲ್ಲ. ಶಿಕ್ಷಕರ ಬದ್ಲಿ ಕುರಿತು ಬರೆಯಲಿಕ್ಕೆ ನಾಚಿಕೆಯಾಗುತ್ತಿದೆ.

ಲಂಚದ ಆರೋಪದ ಮೇಲೆ ಬದ್ಲಿಯಾದ ಕಾರಕೂನರು, ಅಧಿಕಾರಿಗಳು ನಾಲ್ಕೈದು ತಿಂಗಳೊಳಗಾಗಿಯೇ ಮತ್ತೆ ತಮ್ಮ ಮೊದಲಿನ ಕುರ್ಚಿಯಲ್ಲೇ

[8ನೇ ಪುಟ ನೋಡಿ]

ಭಾರತ ಸೋವಿಯೆತ್ ಮೈತ್ರಿ ಬಿಜೆಪಿ ಬೊಬ್ಬೆ

(ಪೀಪಲ್ಸ್‌ಡೆಮೊಕ್ರಸಿಯಿಂದ)

ಭಾರತ ಮತ್ತು ಸೋವಿಯೆತ್ ಒಕ್ಕೂಟದ ನಡುವೆ ದಿನೇ ದಿನೇ ವೃದ್ಧಿಗೊಳ್ಳುತ್ತಾ ಹೋಗುತ್ತಿರುವ ಸ್ನೇಹ ಸಂಬಂಧಗಳು ನಮ್ಮ ದೇಶದ ಪ್ರತಿಗಾಮಿಗಳ ಕೆಂಗಣ್ಣಿಗೆ ತುತ್ತಾಗಿವೆ. ಈ ಶಕ್ತಿಗಳಿಗೆ ನಾಯಕ ಮಣಿಗಳಾದ ಬಿ.ಜೆ.ಪಿ.,ಭಾರತ ಹಾಗೂ ಸೋವಿಯೆತ್ ಒಕ್ಕೂಟಗಳ ನಿರಂತರ ಸಹಕಾರವನ್ನು ನಮ್ಮ ದೇಶದ ಸ್ವಾತಂತ್ರ್ಯ ಹಾಗೂ ಸಾರ್ವಭೌಮತೆಯನ್ನು ಮುಳುಗಿಸಲು ಮಾಡುವ ಕುತಂತ್ರವೆಂಬಂತೆ ಕಾಣುತ್ತಿದೆ. ಪ್ರತಿಯೊಬ್ಬ ಎಡ ಅಥವಾ ಪ್ರಗತಿಪರ ಜನವಾದಿಯು ನಮ್ಮ ದೇಶವನ್ನು ನುಂಗಲು ಹೊರಟಿರುವ ಏಕಮಾತ್ರ ವಿದೇಶಿ ಶಕ್ತಿಯಾದ ಮಾಸ್ಕೋದ ಏಜೆಂಟರೆಂಬಂತೆ ಕಾಣುತ್ತದೆ ಅವರ ಕಾಮಾಲೆಗಣ್ಣಿಗೆ.

ನಮ್ಮ ದೇಶದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸುತ್ತಿರುವ ಯಾವನೋ ಒಬ್ಬ ಪ್ರಾಮಾಣಿಕ ರಾಜಕೀಯ ವೀಕ್ಷಕನಿಗೆ ನಮ್ಮ ದೇಶದ ಆಂತರಿಕ ಬಿಕ್ಕಟ್ಟುಗಳ ದುರುಪಯೋಗ ಪಡಿಸಿಕೊಳ್ಳುವ ಸಾಮ್ರಾಜ್ಯಶಾಹಿಗಳ ಯೋಜನೆ ಕಾಣದೆ ಹೋಗಲು ಸಾಧ್ಯವಿಲ್ಲ. ಪಂಜಾಬಿನಲ್ಲಿ ಮುಂದುವರಿಯುತ್ತಿರುವ ಬಿಕ್ಕಟ್ಟು, ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ ಚಟುವಟಿಕೆ, ಈಶಾನ್ಯ ಭಾಗದಲ್ಲಿ (ಅಸ್ಸಾಂಕಡೆ) ಅಸ್ಥಿರ ಪರಿಸ್ಥಿತಿ,ದೇಶದೆಲ್ಲೆಡೆಯಲ್ಲಿ ಜಾತೀಯ, ಧಾರ್ಮಿಕ ದ್ವೇಷ ಸಂಘಗಳು–ಇವೆಲ್ಲವೂ ನಮ್ಮ ಸಾರ್ವಭೌಮತೆಗೆ, ಐಕ್ಯತೆಗೆ ಮುಳುವಾಗುತ್ತಿವೆ. ಈ ರೀತಿ ಬಿಕ್ಕಟ್ಟುಗಳಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ಹೊರದೇಶಗಳಲ್ಲಿರುವ ನಮ್ಮ ಮಿತ್ರರು ಆತಂಕಗೊಳ್ಳದಿರಲು ಸಾಧ್ಯವೇ? ಇದನ್ನೇ ರಾಜೀವ್‌ಗಾಂಧಿಯ ಹಿಂದಿನ ಭೇಟಿಗಳಲ್ಲಿ ಮಾಡಿದಂತೆಯೇ ಈ ಬಾಗಿಯೂ ಸೋವಿಯೆತ್ ನಾಯಕರು ಮಾಡಿರುವುದು.

ಸೋವಿಯೆತ್ ನಾಯಕರು ವ್ಯಕ್ತಪಡಿಸಿದ ಈ ಆತಂಕದ ಬಗ್ಗೆ ಬಿಜೆಪಿಗೆ ದೊಡ್ಡ ಚಿಂತೆಯಾಗಿವೆ ಎಂಬುದರಿಂದ

[8ನೇ ಪುಟ ನೋಡಿ]

"ಮೀನ ಮಾಸತ್ತಿಲೆ ಸೂರ್ಯನ್"

ಒಂದು ಚಿತ್ರ ವಿಮರ್ಶೆ

ನಲುವತ್ತನಾಲ್ಕು ವರ್ಷಗಳಿಗೂ ಹಿಂದೆ-ಮಾರ್ಚ್ 29, 1943 ರಂದು ಅಂದಿನ ಕಾಸರಗೋಡು ತಾಲೂಕಿಗೆ ತಾಕಿಕೊಂಡಿದ್ದ ಮಲಬಾರ್ ಪ್ರದೇಶದ ಕಗ್ಗಳ್ಳಿ ಕಯ್ಯೂರಿನ ನಾಲ್ವರು ಯುವಕರನ್ನು ಬ್ರಿಟಿಷ್ ಸರ್ಕಾರ ಗಲ್ಲಿಗೇರಿಸಿ ಕೊಂದು ಹಾಕಿತು. ಸಾಮ್ರಾಜ್ಯಶಾಹಿಯ ರಕ್ತಪಿಪಾಸೆಗ ಬಲಿಯಾಗಿ ಪ್ರಾಣತೆತ್ತ ಈ ನಾಲ್ವರು ಸಂಗಾತಿಗಳು ಕೋಯಿತಟ್ಟಿನ ಚಿರುಕಂಡ, ಮಠದ ಅಪ್ಪು, ಪೊಡವರ ಕುಂಞಂಬು ಮತ್ತು ಅಬೂಬಕ್ಕರ್, ಬ್ರಿಟಿಷ್ ಸಾಮ್ರಾಜ್ಯದ ಪೋಲೀಸು ಪೇದೆ ಸುಬ್ಬರಾಯನ ಹತ್ಯೆಗೆ ಈ ನಾಲ್ವರು ಕಾರಣರೆಂಬುದೇ ಅವರ ಮೇಲಿದ್ದ ಆರೋಪ. ಆದರೆ ನಿಜವಾದ ಕಾರಣ ಇದಲ್ಲ. ಕಯ್ಯೂರಿನ ಸಂಗಾತಿಗಳು ಕಮ್ಯೂನಿಸ್ಟರ ನೇತೃತ್ವದಲ್ಲಿ ರೈತ ಸಂಘ ಕಟ್ಟಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸವಾಲೆಸೆದಿದ್ದರು.

ಭಾರತದಲ್ಲಿ ಸಾಮ್ರಾಜ್ಯಶಾಹಿಗೆಆಧಾರ ಸ್ತಂಭವಾಗಿದ್ದ ಪಾಳೆಯಗಾರಿ ಭೂಮಾಲಕ ವ್ಯವಸ್ಥೆಗೆ ಸಡ್ಡು ಹೊಡೆದಿದ್ದರು. ಎರಡನೇ ಮಹಾಯುದ್ಧದಲ್ಲಿ ಸಿಕ್ಕುನುಗ್ಗಾಗಿದ್ದ ಬ್ರಿಟಿಷ್ ಸರ್ಕಾರ ಈ ಸವಾಲನ್ನು ಲಘುವಾಗಿ ಪರಿಗಣಿಸಿದರೆ ಅದು ತನ್ನ ದೌರ್ಬಲ್ಯದ ಸೂಚನೆಯಾದೀತೆಂದು ಭಯಪಟ್ಟು ಕಯ್ಯೂರು ಹೋರಾಟಗಾರರನ್ನು ಕ್ರೂರವಾಗಿ ನಡೆಸಿಕೊಂಡಿತು. ಕಯ್ಯೂರು ಸಂಗಾತಿಗಳಲ್ಲಿ ಮರಣದಂಡನೆಯ ಶಿಕ್ಷೆಗೊಳಗಾದ ಐವರಲ್ಲಿ ಅಪ್ರಾಯಸ್ಥನೆಂಬ ಕಾರಣಕ್ಕಾಗಿ ನೇಣುಗಂಬದಿಂದ ಪಾರಾದವನು ಕುಟ್ಟಿಕೃಷ್ಣನೆಂಬ ಪುಟಾಣಿಯೊಬ್ಬನೇ.

ದೇಶಾದ್ಯಂತ ಸ್ವಾತಂತ್ರ್ಯ ಪ್ರೇಮಿಗಳ ಆಸಕ್ತಿ ಕೆರಳಿಸಿದ್ದ ಕಯ್ಯೂರು ಮೊಕದ್ದಮೆಯಲ್ಲಿ ಅಪಾದಿತರಾಗಿದ್ದ ಕಾ ವಿ.ವಿ. ಕುಂಞಂಬು, ಕಾ.ಇ.ಕೆ. ನಾಯನಾರ್, ಕಾ.ಮಾಧವನ್, ಕಾ. ಗಣಪತಿ ಕಾಮತ್ ಮತ್ತು ಇನ್ನೂ ಹಲವರು, ಅಪಾದಿತರನ್ನು ವಿಮೋಚನೆಗೊಳಿಸಲು ಛಲಹಿಡಿದು ವಾದಿಸಿದ ರಂಗರಾವ್ ತಲಚೇರಕರ್ ಇವರಲ್ಲಿ ಹೆಚ್ಚಿನವರು ಮೊನ್ನೆ ಮೊನ್ನೆ ತನಕ ನಮ್ಮೊಂದಿಗೆ ಇದ್ದರು, ಕೆಲವರು ಈಗಲೂ ಇದ್ದಾರೆ. ಕಾ. ಇ.ಕೆ.ನಾಯನಾರ್ ಸದ್ಯ ಕೇರಳದ ಮುಖ್ಯಮಂತ್ರಿಯೂ ಆಗಿದ್ದಾರೆ. ಕಯ್ಯೂರಿನ ಕತೆ ಇನ್ನೂ ದಂತ ಕತೆ ಆಗಿಲ್ಲ; ಅದು ನಮ್ಮ ನಿಕಟಪೂರ್ವ ಇತಿಹಾಸದ ಭಾಗವಾಗಿ ಇಂದಿಗೂ ಜೀವಂತವಾಗಿದೆ.

ಕಯ್ಯೂರು ಸಂಗಾತಿಗಳ ಈ ಸಾಟಿಯಿಲ್ಲದ ಬಲಿದಾನದ ಕತೆಯನ್ನು ದಾಖಲಿಸಿ ಮೊತ್ತಮೊದಲ ಬಾರಿಗೆ ಕಾದಂಬರಿಯ ರೂಪ ಕೊಟ್ಟುಅದನ್ನು 'ಚಿರಸ್ಮರಣೆ' ಯನ್ನಾಗಿ ಮಾಡಿದ ಕೀರ್ತಿ ಕನ್ನಡದ ಹೆಮ್ಮೆಯ ಸಾಹಿತಿ ನಿರಂಜನರದ್ದು. "ಚಿರಸ್ಮರಣೆ" ಮಲೆಯಾಳಿ ಭಾಷೆಗೆ ಭಾಷಾಂತರವಾದಾಗ ಕಾ. ಇ.ಎಂ.ಎಸ್. ನಂಬೂದಿರಿಪ್ಪಾಡ್ ಮಲೆಯಾಳಿ ಬರಹಗಾರರನ್ನು ತರಾಟೆಗೆ ತೆಗೆದುಕೊಂಡರಂತೆ ಕೇರಳದ ಪುಟ್ಟ ಹಳ್ಳಿಯಲ್ಲಿ ನಡೆದ ಈ ಘಟನೆಯನ್ನು ಕನ್ನಡದ ಸಾಹಿತಿಯೊಬ್ಬರು ಕಾದಂಬರಿ ರೂಪದಲ್ಲಿ ದಾಖಲಿಸಿಕೊಳ್ಳಬೇಕಾಯಿತು; ಇತ್ತೀಚೆಗೆ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ 'ಭಾರತೀಯ ಪನೋರಮ'ದಲ್ಲಿತೋರಿಸಲಾದ ಲೆನಿನ್ ರಾಜೇಂದ್ರನ್ ಅವರ 'ಮೀನಮಾಸತ್ತಿಲೆ ಸೂರ್ಯನ್' ಚಿತ್ರ ನೋಡಿದ ಮೇಲೆ ಬೇರೆ ಬೇರೆ ಕಾರಣಗಳಿಗಾಗಿ ಕನ್ನಡದ ಘಟಾನುಘಟಿ ಚಿತ್ರ ನಿರ್ದೇಶಕರ ಬಳಿಯೂ ಇದೇ ಪ್ರಶ್ನೆ ಕೇಳಬೇಕೆನಿಸಿದೆ. "ಕನ್ನಡದ ಈ ಉತ್ಕೃಷ್ಟ ಕಾದಂಬರಿಯನ್ನು ನೀವು ಯಾಕೆ ಸಿನೆಮಾ ಮಾಡಲಿಲ್ಲ ?"

ರಾಜೇಂದ್ರನ್ ನಿರ್ದೇಶನದ"ಮೀನ ಮಾಸತ್ತಿಲೆ ಸೂರ್ಯನ್" ಮಲೆಯಾಳಿ ಚಿತ್ರ ನಿರಂಜನರ"ಚಿರಸ್ಮರಣೆ"ಆಧಾರಿತ ಚಿತ್ರ ಅಲ್ಲ 'ಮೀನಮಾಸತ್ತಿಲೆ ಸೂರ್ಯನ್' ಬಗ್ಗೆ ಅಸಮಾಧಾನಕ್ಕೆ ಇದೇ ಕಾರಣ. 'ಮೀನ ಮಾಸತ್ತಿಲೆ' ಹೆಚ್ಚುಕಡಿಮೆ ಕಯ್ಯೂರಿನ ಘಟನೆಗಳ ಯಥಾವತ್ ಚಲನಚಿತ್ರರೂಪ; ಅಥವಾ ಒಂದು ರೀತಿಯ ಡಾಕ್ಯುಮೆಂಟರಿ. ನಿರಂಜನರ 'ಚಿರಸ್ಮರಣೆ' ವಾಸ್ತವಾಂಶಗಳ ನೆಲೆಗಟ್ಟಿನ ಮೇಲೆ ಹೆಣೆಯಲಾದ 'ಕಲಾ ಕೃತಿ' ಅಷ್ಟೇ ಅಲ್ಲ: 'ಚಿರಸ್ಮರಣೆ' ತನ್ನ ಸೂಕ್ಷ್ಮ ಪರಿಶೀಲನೆ ಮತ್ತು ಸೈದ್ಧಾಂತಿಕ ಗಟ್ಟಿತನದಿಂದಾಗಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕಾರ್ಯಕರ್ತರಿಗೆ ಅವರು ಹೆಜ್ಜೆ ಹೆಜ್ಜೆಗೂ ಅನುಸರಿಸಬೇಕಾದ ಕಾರ್ಯತಂತ್ರ ಮತ್ತು ಕಾರ್ಯಯೋಜನೆಗಳ ದಿಕ್ಸೂಚಿಯಾಗಿದೆ. ರೈತ, ಕಾರ್ಮಿಕರ ಪಾಲಿಗೆ ಅದೊಂದು ಕಲಾತ್ಮಕ ಪಾಠ ಪುಸ್ತಕ. ಕತೆಯೊಂದನ್ನು ದೃಶ್ಯ ಮಾಧ್ಯಮಕ್ಕೆ ಪರಿವರ್ತಿಸುವಾಗ ಎಷ್ಟೋ ಇತಿಮಿತಿಗಳಿರುತ್ತವೆ ಯೆಂಬುದನ್ನು ಒಪ್ಪಿಕೊಂಡರೂ ಲೆನಿನ್ ರಾಜೇಂದ್ರನ್ ಅವರ "ಮೀನಮಾಸತ್ತಿಲೆ ಸೂರ್ಯನ್" ನಿರಂಜನರ "ಚಿರಸ್ಮರಣೆ"ಗೆ ಎಂದೂ ಸರಿ ಸಾಟಿಯಾಗುವುದಿಲ್ಲ. ಆದುದರಿಂದಲೇ ಈ ಚಿತ್ರವನ್ನು ನೋಡುವಾಗ ನಿರಂಜನರ "ಚಿರಸ್ಮರಣೆ"ಯನ್ನು ಮರೆತು ಬಿಟ್ಟು ನೋಡಬೇಕಾಗುತ್ತದೆ.

'ಮೀನ ಮಾಸತ್ತಿಲೆ ಸೂರ್ಯನ್' ಕೇರಳದ ಸರ್ವಾಂಗ ಸುಂದರ ಪ್ರಕೃತಿಯನ್ನು ಬಣ್ಣದಲ್ಲಿ ಅಂದವಾಗಿ ಸೆರೆಹಿಡಿದಿದೆ. (ಕೆಮರಾ-ಶಾಜಿ), ಸಾಮಾನ್ಯ ಕಮರ್ಷಿಯಲ್ ಚಿತ್ರವೊಂದಕ್ಕೆ ಇಷ್ಟೇ ಸಾಕಾಗುತ್ತಿತ್ತು. ಆದರೆ ಕಯ್ಯೂರಿನ ಹೋರಾಟಗಾರರ ಬಲಿದಾನದ ಕತೆಯ ಪಾಲಿಗೆ ಈ ಬಣ್ಣ ಈ ಮರುಳುಗೊಳಿಸುವ ಪ್ರಕೃತಿಸೌಂದರ್ಯ ತಾನು ಬೇರೆಯಾಗಿಯೇ ನಿಂತು ದಿಕ್ಕುತಪ್ಪಿಸುತ್ತದೆ ಎಂ.ಎಸ್ ಶ್ರೀನಿವಾಸನ್ ಅವರ ಅಬ್ಬರದ ಸಂಗೀತ ದಬಗೆಗೂ ಈ ಮಾತು ಅನ್ವಯಿಸುತ್ತದೆ. ಮುಖ್ಯಪಾತ್ರಗಳಾದ ಅಬೂಬಕ್ಕರ್, ಚಿರುಕಂಡ,ಅಪ್ಪು,ಕುಂಞಂಬು ಇವರೆಲ್ಲ ನಮ್ಮ ಕಾಲದ ಯುವಕರು ಹಳೆಯ ಕ್ರಾಂತಿಕಾರಿಗಳ ವೇಷತೊಟ್ಟಂತೆ ಕಾಣುತ್ತದೆ. ಹೊರತು 1940 ರ ದಶಕದ ರೈತ ಕಾರ್ಮಿಕರ ಮಕ್ಕಳಂತೆ ಕಾಣುವುದಿಲ್ಲ. ಕಾಸ್ಟ್ಯೂಮ್ಸ್ ಕರೆಗೆ ಸಾಕಷ್ಟು ಗಮನ ಹರಿಸದಿರುವುದು ಸ್ಪಷ್ಟ.'ಚಿರಸ್ಮರಣೆ, ಯಂತಹ ಕಾದಂಬರಿಗೆ ನಿಸ್ತುವಾಗಿ ಓದುಗರ ಮೇಲೆ ಅಪಾರ ಪರಿಮಣಾಮ ಬೀರಿರುವ ಕಯ್ಯೂರಿನ ಕ್ರಾಂತಿಕಾರಿಗಳ ಕತೆಯನ್ನು ಬೆಳ್ಳಿತೆರೆಯ ಮೇಲೆ ತರುವಾಗ ಇನ್ನಷ್ಟು ಎಚ್ಚರ ಕಾಳಜಿ ವಹಿಸಬೇಕಾಗಿತ್ತು.

ಇಲ್ಲಿ ಇನ್ನೂ ಒಂದು ಮಾತನ್ನು ಹೇಳಬೇಕಾಗುತ್ತದೆ.ಅಪ್ಪು,ಚಿರುಕಂಡ, ಕುಂಞಂಬು ಮತ್ತು ಅಬೂಬಕ್ಕರ್ ನೇಣುಗಂಬ ಏರಿ ಹುತಾತ್ಮರಾದಾಗ ತಮ್ಮ ಬಲಿದಾನವು ಕಲಾತ್ಮಕ ಚಿತ್ರವೊಂದಕ್ಕೆ ವಸ್ತುವಾಗಲಿ ಎಂದು ಹಾರೈಸಿ ಸಾಯಲಿಲ್ಲ. ಅವರು ಸತ್ತದ್ದು ಬೇರೆಯೇ ಉದ್ದೇಶಕ್ಕಾಗಿ ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ ಭಾರತ ಮುಕ್ತಿ ಹೊಂದಲಿ ಮತ್ತು ಪಾಳೆಯಗಾರಿ-ಭೂಮಾಲಕ ವ್ಯವಸ್ಥೆ ಕೊನೆಗಾಣಲಿ ಎಂಬ ಉದ್ದೇಶಕ್ಕಾಗಿ ನಡೆದದ್ದು ಅವರ ಬಲಿದಾನ ಈ ಪಾಳೆಯಗಾರಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡು ಅದನ್ನು ಸ್ವಾತಂತ್ರ್ಯನಂತರವೂ ಉಳಿಯಗೊಟ್ಟ ಭಾರತದ ಗುತ್ತೇದಾರಿ ಬಂಡವಾಳಶಾಹಿ ಹಾಗೂ ಅದರ ಪ್ರತಿನಿಧಿಯಾದ ಕಾಂಗ್ರೆಸ್ ಈಗಲೂನಮ್ಮ ದೇಶದಲ್ಲಿ ಅಧಿಕಾರದಲ್ಲಿದೆ-ಅದು-ಸಾಮ್ರಾಜ್ಯಶಾಹಿ-ವಿದೇಶೀ ಬಂಡವಾಳಗಾರರೊಂದಿಗೆ ಇನ್ನೂ ಸಹಯೋಗ ನಡೆಸುತ್ತಿದೆ. ಚಿರುಕಂಡ,ಅಪ್ಪುಮತ್ತು ಅವರ ಸಂಗಾತಿಗಳು ಈಗ ಬದುಕಿದ್ದರೆ ಈ ಒಪ್ಪಂದ ಮತ್ತು ಸಹಯೋಗದ ವಿರುದ್ಧ ಹೋರಾಡುತ್ತಿದ್ದರು. ಅವರು ಇದಕ್ಕಾಗಿಯೇ 1943ರಲ್ಲಿ ಹುತಾತ್ಮರಾಗಿದದ್ದು, ಅವರ ಕತೆಯನ್ನು ಕಾದಂಬರಿಯಾಗಿ, ಹಾಡಾಗಿ, ಚಲನಚಿತ್ರವಾಗಿ ನಾಟಕವಾಗಿ ಈಗಲೂ ಹೇಳಬೇಕು; ಇನ್ನೂ ಮುಂದೆಯೂ ಹೇಳಬೇಕು. ಈ ದೃಷ್ಟಿಯಲ್ಲಿ ಮೊತ್ತಮೊದಲ ಬಾರಿಗೆ ಕಯ್ಯೂರೂ ಕತೆಯನ್ನು ಚಲನಚಿತ್ರಕ್ಕೆ ಮಾರ್ಪಡಿಸಿದ ರಾಜೇಂದ್ರನ್ ಅವರ ಪ್ರಯತ್ನ ಪ್ರಶಂಸನೀಯ. ಅವರ ಚಿತ್ರನಾಜೂಕಾಗಿಲ್ಲದಿರಬಹುದು; ಕಲಾತ್ಮಾಕವಾಗಿಲ್ಲದಿರಬಹುದು. ಆದರೂ ಅದು ಸ್ವಾಗತಾರ್ಹ ಪ್ರಯತ್ನ'ಮೀನಮಾಸತ್ತಿಲೆಸೂರ್ಯನ್' ಯನ್ನು ಎಲ್ಲರೂ ನೋಡಬೇಕು.

ಎ. ಎಸ್. ಆಚಾರ್ಯ

ನಮ್ಮ ಜನಾಂಗದ ಪ್ರಗತಿಪರ ಕವಿಗಳಲ್ಲೊಬ್ಬರಾದ ಸು. ರಂ. ಎಕ್ಕುಂಡಿಯವರ ಕವನಗಳನ್ನು ಹಿಂದೆ ಐಕ್ಯರಂಗದಲ್ಲಿ ಪ್ರಕಟವಾಗಿವೆ. ಶಾಂತಿಯ ಬಗ್ಗೆ ಅತೀವ್ರ ಕಾಳಜಿ ಹೊಂದಿರುವ ಇವರೊಡನೆ ಐಕ್ಯರಂಗ ನಡೆಸಿದ ಸಂದರ್ಶನ.

ವಿಶ್ವಶಾಂತಿಗಾಗಿ ಕಾತರಿಸುವ ಕವಿ — ಸು. ರಂ. ಎಕ್ಕುಂಡಿ

ಸಂದರ್ಶಿಸಿದವರು :
ಜಿ. ಎಸ್. ಮೋಹನ್

ನಮ್ಮ ಜನಾಂಗದ್ದು ಪ್ರೊಮೀಥಿಯಸ್ ಬದುಕು. ಪ್ರೊಮೀಥಿಯಸ್ ಗ್ರೀಕ್ ಪುರಾಣದ ಕಾವು ನೀಡುವ ಬೆಂಕಿ ಬೀಜ. ಆತನ ಇತಿಹಾಸ ದಾಖಲಾದದ್ದೂ ಸಹ ಆತನ ಮರಣದಿಂದ. ಗ್ರೀಕ್ ಜನರಿಗೆ ಹಸಿವು ನೀಗಿಸುವ ಮೂಲ ಶಕ್ತಿಯಾದ ಬೆಂಕಿ ಬೇಕಿತ್ತು. ಬೆಂಕಿ ಇಲ್ಲದೆ ಗ್ರೀಕ್ ಕತ್ತಲಿನ ಕೂಪದಲ್ಲಿ ಮುಳುಗಿತ್ತು. ಎಲ್ಲೆಲ್ಲೂ ಹಸಿವು, ಹಾಹಾಕಾರ. ಪ್ರೊಮೀಥಿಯಸ್ ಅವರ ನೋವುಗಳನ್ನು ಕಂಡವ ಆದರೆ ಬೆಂಕಿ ಇದ್ದದ್ದು ಗ್ರೀಕರ ದೇವತೆ ಸ್ವರ್ಗದಲ್ಲಿದ್ದ ಜ್ಯುಪಿಟರ್‌ನ ಬಳಿ. ಜ್ಯುಪಿಟರ್ ದೇವತೆಯ ಬಳಿ ಏನಾದರೂ ಬೆಂಕಿ ಕದ್ದುತರಲು ಹೋದರೆ ಅಲ್ಲಿ ಕಾದಿದ್ದ ಗಿಡುಗ ಕಡಿಯಲು ಹೋಗುವವರ ಎದೆ ಕುಕ್ಕಿಕುಕ್ಕಿ ಸಾಯಿಸುತ್ತದೆ. ಪ್ರೊಮೀಥಿಯಸ್‌ಗೆ ದ್ವಂದ್ವ ಜನರ ಕಷ್ಟ ನೀಗಿಸದೆ ಸುಮ್ಮನಿರಬೇಕೋ ಅಥವಾ ಬೆಂಕಿ ಕದ್ದು ತಂದು ತನ್ನ ಜನರಿಗೆ ನೀಡಿ ತಾನು ಸಾಯಬೇಕೋ? ಆಗ ಆತ ಒಂದು ತೀರ್ಮಾನಕ್ಕೆ ಬರುತ್ತಾನೆ. ಆತನ ಕಣ್ಣುಗಳಲ್ಲಿ ಕಾಂತಿ ಬೆಳಗಲು ಆರಂಭಿಸುತ್ತೆ. ಆ ಪ್ರೊಮೀಥಿಯಸನ ಕಣ್ಣಿನ ಬೆಳಕು ನಮ್ಮ ಕಾವ್ಯದ ಉಸಿರಾಗಬೇಕು. ಅನಕ್ಷರಸ್ಥ ಮುಗ್ಧ ಜನಗಳು ಸಂಕಷ್ಟಗಳ ಮಧ್ಯೆ ನಾವು ಕವಿಗಳು ಅವರಿಗೆ ಬೆಂಕಿಯನ್ನು ಹೊತ್ತು ತರುವ ಪ್ರೊಮೀಥಿಯಸ್‌ಗಳಾಗಬೇಕು ಎನ್ನುವ ಎಕ್ಕುಂಡಿ ಮಾರ್ಕ್ಸ್, ಲೆನಿನ್‌ರಂತಹ ಚಿಂತಕರ ಬಗ್ಗೆ ಹಲವು ಕವಿತೆಗಳನ್ನು ಬರೆದಿದ್ದಾರೆ. ಕದ ಬಡಿಯುವವರು, ನಂ1 ಆ್ಯಂಡರ್‌ಸನ್ ಬೀದಿ, ಲಂಡನ್ ಮಾರ್ಕ್ಸ್ ಜೀವನದ ಬಗ್ಗೆ ಬರೆದ ಕವನಗಳು.

'ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ' ಎಂಬುದು ಎಕ್ಕುಂಡಿಯವರ ಅಭಿಪ್ರಾಯ. ಈ ನಿಟ್ಟಿನಲ್ಲಿ ಅವರ ಸಾಮಾಜಿಕ ಸ್ಪಂದನದ ಪ್ರಯತ್ನವೇನೆಂದು ಪ್ರಶ್ನಿಸಿದೆ.

ಎಕ್ಕುಂಡಿ: ನಾನು ಬೆಳೆದದ್ದು ಅತ್ಯಂತ ನಿಕೃಷ್ಟವಾದ ಪರಿಸ್ಥಿತಿಯಲ್ಲಿ. ನಾನು ಬೆಳೆದ ಬಗೆ ಯಾವ ನಿಕೃಷ್ಟ ಬಡ ವ್ಯಕ್ತಿ ಬೆಳೆದ ಬಗೆಗಿಂತ ಭಿನ್ನವಾಗಿರಲಿಲ್ಲ. ನನ್ನ ಆ ನೋವಿನ ದಿನಗಳಲ್ಲಿಯೇ ನನ್ನನ್ನು ಓದುವುದರಲ್ಲಿ ತೊಡಗಿಸಿಕೊಳ್ಳುತ್ತಾ ಹೋದೆ. ಹಾಗೆ ಓದಲು ಪ್ರಾರಂಭಿಸಿದಂತೆಲ್ಲಾ ನಾನು ಓದಿದ Mind in Chains ಪುಸ್ತಕ ನನ್ನ ದೃಷ್ಟಿಕೋನವನ್ನು ಬದಲಾಯಿಸಲು ಸಹಾಯ ಮಾಡಿತು. ಆ ಹೊತ್ತಿನಲ್ಲಿ ನಮ್ಮ ಮನೆಯ ಬಳಿಯೇ ಕಮ್ಯುನಿಸ್ಟ ಪಕ್ಷದ ಕಛೇರಿಯಿತ್ತು. ಫ್ರೆಡರಿಕ್ ಜಾರ್ಜಿಯೋ, ಕ್ರಿಸ್ಟಾಫರ್ ಕಾಡ್ವೆಲ್, ಮಾಯ್‌ಕೋವ್‌ಸ್ಕಿ ಮುಂತಾದವರು ಅಲ್ಲಿಂದಲೇ ಪರಿಚಿತರಾದದ್ದು. ಅವರ ಕಾವ್ಯಗಳಿಗೆ ನನ್ನನ್ನು ತೆರೆದುಕೊಂಡೆ. ಅಷ್ಟರಲ್ಲಿ ಓದು ಸಹ ಮುಗಿದಿತ್ತು. ಮುಂದಿನ ಜೀವನದ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಕ್ರಾಂತಿಗಿಂತ ಕ್ರಾಂತಿಗೆ ಜನರನ್ನು ತಯಾರು ಮಾಡುವ ಕೆಲಸ ಅತ್ಯಂತ ಕಷ್ಟವಾದದ್ದು ಎಂಬ ಮಾತು ಗುಂಯ್‌ಗುಡುತ್ತಿತ್ತು. ನನ್ನ ಮುಂದಿನ ಪೀಳಿಗೆಗೆ ನಾನು ಕಲಿತದ್ದನ್ನು ಧಾರೆಯೆರೆಯಬೇಕಿತ್ತು. ಅದಕ್ಕೆ ಶಿಕ್ಷಕ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡೆ. ಅಷ್ಟರಲ್ಲಿ ಕಮ್ಯುನಿಸ್ಟ ಚಟುವಟಿಕೆಗಳು ತೀವ್ರವಾಗಿದ್ದವು. ಕಮ್ಯುನಿಸ್ಟ ಪಕ್ಷದ ಮೇಲೆ ನಿಷೇಧ ಹೇರಲಾಯಿತು. ಹಲವರು ಭೂಗತರಾಗಿ ಚಟುವಟಿಕೆ ಪ್ರಾರಂಭಿಸಿದ್ದರು. 'ಜನಶಕ್ತಿ'ಪತ್ರಿಕೆಗೆ ನಾವೆಲ್ಲಾ ಆ ಭಯದ ದಿನಗಳಲ್ಲೂ ಬರೆಯಲು ಪ್ರಾರಂಭಿಸಿದ್ದೆವು. ನಿರಂಜನ, ಚಿನ್ನವೀರ ಕಣವಿ ಮುಂತಾದವರೊಡನೆ ಪ್ರಗತಿಶೀಲ ಚಳುವಳಿ ಪ್ರಾರಂಭವಾಯಿತು. ನನ್ನನ್ನು ಅದರಲ್ಲಿ ತೊಡಗಿಸಿಕೊಂಡೆ. ಇಂದು ಸುಮಾರು ವಿದ್ಯಾರ್ಥಿಗಳು ನಮ್ಮಿಂದ ಹಾದು ಹೋಗಿದ್ದಾರೆ. ಅವರಿಗೆ ಸಾಮಾಜಿಕ ಕಳವಳ ಮೂಡಿಸುವ ಪ್ರಯತ್ನ ನನ್ನಾದರೂ ಮಾಡಿದ್ದೇನೆ ಎಂಬ ಸಮಾಧಾನ ನನಗಿದೆ. ಆದರೆ, ಇಂದಿಗೂ ನಾನು ಪಾರ್ಟಿಯ ಕಾರ್ಯಕರ್ತನಾಗಿ ಹೋರಾಡಲು ಸಾಧ್ಯವಾಗಲಿಲ್ಲ ಎಂಬ ಕೊರಗು ಕಾಡುತ್ತಿದೆ. ನನ್ನ ಪರಿಸ್ಥಿತಿಗಳು ನನ್ನನ್ನು ಹಿಡಿತದಲ್ಲಿಟ್ಟದ್ದವು. ನನಗೆ ಅನಿಸುತ್ತದೆ–

'ಕೆಲವರು ಯೋಧರಾಗಿ ರಣರಂಗಕ್ಕೆ ಹೋಗುತ್ತಾರೆ. ಅದು ಸಾಧ್ಯವಾಗದೆ ಉಳಿಯಲೇಬೇಕಾದವರು ಅವರಿಗೆ ಕತ್ತಿ, ಗುರಾಣಿ, ಶಸ್ತ್ರಗಳನ್ನು ತಯಾರಿಸುತ್ತಾರೆ.

ಈಗ ನಿಮ್ಮ ಮುಂದಿನ ಯೋಜನಗಳೇನು ?

ಶಾಂತಿ ಇಂದಿನ ತುರ್ತು ಅಗತ್ಯತೆ, ಅದನ್ನು ಜನರ ಮಧ್ಯೆ ಕೊಂಡೊಯ್ಯಲೆಬೇಕು. ಮುಖ್ಯವಾಗಿ ಇಂದಿನ ರೇಗನ್ ಯುದ್ಧಕೋರತನದ ವಿರುದ್ಧ

ಶಾಂತಿಗಾಗಿ ವಿಜ್ಞಾನಿಗಳು "ಶಾಂತಿಗಾಗಿ ವಕೀಲರು" ಇದ್ದಾರೆ. ಅದೇ ರೀತಿ "ಶಾಂತಿಗಾಗಿ ಬರಹಗಾರರು" ಆರಂಭಿಸ ಬೇಕೆಂದಿದ್ದೇನೆ.

[6ನೇ ಪುಟ ನೋಡಿ]

ತುಮಕೂರಿನಲ್ಲಿ ಕರ್ನಾಟಕ ಶಾಂತಿ ಮತ್ತು ಸೌಹಾರ್ದ ಸಮ್ಮೇಳನ

ಅಮೇರಿಕಾದ ಪಿತೂರಿಗಳ ವಿರುದ್ಧ ಭಾರತದ ಸಮಗ್ರತೆ ಕಾಪಾಡಲು ಕರೆ

ತುಮಕೂರಿನಲ್ಲಿ ಜುಲೈ 4ಮತ್ತು 5 ರಂದು ಸಮಾವೇಶಗೊಂಡ ಕರ್ನಾಟಕ ರಾಜ್ಯ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ಐದನೇ ರಾಜ್ಯ ಸಮ್ಮೇಳನದ ಅಂಗವಾಗಿ ಬೃಹತ್ ಮೆರವಣಿಗೆಯನ್ನು ಸಂಯೋಜಿಸಲಾಗಿತ್ತು. ಕಾ|| ಗೋರ್ಬಚೇವ್‌ರವರು ಹಾಕಿ ಕೊಟ್ಟ ಶಾಂತಿ ನೀತಿಯನ್ನು ಪುರಸ್ಕರಿಸಿ ರೀಗನ್ನರ ಯುದ್ಧಕೋರ ನೀತಿಯನ್ನು ಎರಡೂ ದಿನದ ಸಭೆಯಲ್ಲಿ ಬಲವಾಗಿ ಖಂಡಿಸಲಾಯಿತು.

ತುಮಕೂರಿನ ಪುರಭವನದಲ್ಲಿ ಮೊದಲನೆಯ ದಿನ ನಡೆದ ಬಹಿರಂಗ ಸಭೆಯನ್ನು ಮುಖ್ಯಮಂತ್ರಿಗಳ ಪರವಾಗಿ ಜನತಾ ಪಕ್ಷದ ಕಾನೂನು ಸಚಿವ ಲಕ್ಷ್ಮೀಸಾಗರ್‌ರವರು ಉದ್ಘಾಟಿಸಿದರು. ನಂತರ ಮಾತನಾಡಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯದ ಕಾರ್ಯದರ್ಶಿ ಕಾ||ಪಿ. ರಾಮಚಂದ್ರರಾವ್‌ರವರು 'ಶಾಂತಿ ಚಳುವಳಿ ಇಂದು ತುರ್ತು ಅಗತ್ಯ. ಭಾರತದಂತಹ ರಾಷ್ಟ್ರ ತನ್ನ ರಾಜಕೀಯ ವಿದೇಶ ನೀತಿಯೊಂದಿಗೆ ಯುದ್ಧಕೋರರನ್ನು ದೂರವಿಡುವಲ್ಲಿ ಶ್ರಮಿಸುತ್ತಿದೆ. ಶಾಂತಿಪರ ಚಳುವಳಿಯ ಮುಂಚೂಣಿಯಲ್ಲಿರುವ ಸೋವಿಯತ್ ರಷ್ಯಾದ ಶಾಂತಿ ನೀತಿಯೊಂದಿಗೆ ಕೈಗೂಡಿಸಿದ್ದು ರೀಗನ್‌ಗೆ ತಲೆನೋವು ತಂದಿದೆ. ಆದ್ದರಿಂದಲೇ ಸಾಮ್ರಾಜ್ಯಶಾಹಿ ಅಮೇರಿಕಾ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಭಂಗಗೊಳಿಸಲು ನಿರ್ಧರಿಸಿ ಪಾಕಿಸ್ತಾನ, ಶ್ರೀಲಂಕಾ, ಹಿಂದೂ ಮಹಾ ಸಾಗರಗಳ ಮೂಲಕವಲ್ಲದೆ ಭಾರತದ ಒಳಗೂ ವಿಚ್ಛಿದ್ರಕಾರಿ ಸಂಘಟನೆಗಳಿಗೆ ಬೆಂಬಲ ನೀಡುವುದರ ಮೂಲಕ ಭಾರತವನ್ನು ಅಸ್ಥಿರಗೊಳಿಸಿ ತನ್ನ ಕೈಗೊಂಬೆಯಾಗಿಸಿಕೊಳ್ಳಲು ಪ್ರಯತ್ನಿಸುತ್ತಿದೆ' ಎಂದು ಹೇಳುತ್ತಾ, ಇಂದು ಶಾಂತಿ ಚಳುವಳಿಯಲ್ಲಿ ಯಾರು ಭಾಗವಹಿಸಬೇಕು? ಹಿಂದುಳಿದ ರಾಷ್ಟ್ರಗಳು ಶಾಂತಿಯನ್ನು ತೀವ್ರವಾಗಿ ಪರಿಗಣಿಸಬೇಕಾದ ಸ್ಥಿತಿ ಏಕೆ ಇದೆ ಎಂಬುದನ್ನು ವಿಶ್ಲೇಷಿಸಿದರು. ಲೆಬನಾನ್ ಮೇಲಿನ ಬಾಂಬ್ ದಾಳಿಯಾಗಲಿ, ಇಂದಿರಾ ಗಾಂಧಿಯವರ ಕೊಲೆಯ ಹಿಂದೆ ಇರುವ ಶಕ್ತಿ ಈ ಸಾಮ್ರಾಜ್ಯಶಾಹಿಗಳದ್ದೇ ಎಂದು ವಿವರಿಸಿದರು.

ಸಿ.ಪಿ.ಐ.ನ ರಾಜ್ಯ ಕಾರ್ಯದರ್ಶಿ ಎಂ.ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಶಾಂತಿಗಾಗಿ ದುಡಿಯುತ್ತಿರುವ ರಷ್ಯಾದ ನಿಲುವು ನಮ್ಮೆಲ್ಲರ ನಿಲುವಾಗಿದೆ. ಭಾರತದ ಶಾಂತಿಯನ್ನು ಕದಡುವ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿರುವ ಅಮೇರಿಕಾ ಯಶಸ್ವಿಯಾಗದಂತೆ ಬಗ್ಗುಬಡಿಯಲು ನಾವು ಶ್ರಮಿಸಬೇಕು ಎಂದು ಹೇಳಿದರು.

ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ರಾಷ್ಟ್ರಮಂಡಳಿಯ ಪೆರಿನ್‌ರಮೇಶ್‌ಚಂದ್ರ ಮಾತನಾಡುತ್ತಾ 'ಅಮೇರಿಕಾದ ಯುದ್ಧಕೋರ ನೀತಿಯನ್ನು ಖಂಡಿಸುತ್ತಿರುವ ವಿಶ್ವಸಂಸ್ಥೆಯನ್ನೇ ಧಿಕ್ಕರಿಸಿ ಹೊರಡುವ ನಿಲುವನ್ನು ರೀಗನ್‌ರವರು ತಳೆದಿದ್ದಾರೆ. ವಿಶ್ವಸಂಸ್ಥೆ ಶಾಂತಿಗಾಗಿ ಕರೆಕೊಟ್ಟನಂತರ ನಾಲ್ಕು ಬಾರಿ ಬಾಂಬ್ ಆಸ್ಫೋಟ ನಡೆಸಿದೆಯೆಂದು 'ಟೈಮ್ಸ್' ಪತ್ರಿಕೆ ವರದಿ ಮಾಡಿದೆ. ನಾವು ಅಮೇರಿಕಾ ಹುಟ್ಟು ಹಾಕುವ ಅಣು ಚಳಿಗಾಲವನ್ನು ಪ್ರವೇಶಿಸುವ ಮುನ್ನ ಅದನ್ನು ಹಿಮ್ಮೆಟ್ಟಿಸೋಣ' ಎಂದು ಕರೆಯಿತ್ತರು.

ಎರಡನೆಯ ದಿನ ನಡೆದ ಪ್ರತಿನಿಧಿ ಸಭೆಯಲ್ಲಿ ಕಾ। ಸೂರಿಯವರು ಮಾತನಾಡುತ್ತಾ ಕಾರ್ಮಿಕ ಸಂಘಗಳು ಹೆಚ್ಚು ಶಾಂತಿಯ ಪರವಾಗಿ ಹೋರಾಡಲು ಕರೆಯಿತ್ತರಲ್ಲದೆ ಸಿ.ಐ.ಟಿ.ಯು. ಅದಕ್ಕೆ ಸಂಪೂರ್ಣವಾಗಿ ಬೆಂಬಲ ನೀಡುವುದೆಂದು ಘೋಷಿಸಿದರು.

ನಂತರ ಮಾತನಾಡಿ ಶಾಂತಿಗಾಗಿ ವಿಜ್ಞಾನಿಗಳ ಗುಂಪಿನ ಭಾರತೀಯ ವಿಜ್ಞಾನ ಸಂಸ್ಥೆಯ ಸೇನ್‌ಗುಪ್ತ ಅಮೇರಿಕಾದ ವಿಚ್ಛಿದ್ರಕಾರಿ ನೀತಿಯ ಬಗ್ಗೆ ಉಚ್ಚರಿಸುತ್ತಾ ಅಮೇರಿಕಾ ಯುವ ಪ್ರತಿಭೆಗಳತ್ತ ಕಣ್ಣಿಟ್ಟಿದೆ. ಅವರನ್ನು ಏನಾದರೂ ಮಾಡಿ ಯುದ್ಧಕೋರ ನೀತಿಗೆ ಒಲಿಸಿಕೊಳ್ಳಲು ತೀವ್ರ ಯತ್ನ ನಡೆಸುತ್ತಿದೆ. ಈ ಯೋಜನೆಗಳ ಬಗ್ಗೆ ಎಲ್ಲರೂ ಎಚ್ಚರಿಕೆಯಿಂದಿರಬೇಕು ಎಂದು ಹೇಳಿದರು.

ನಂತರದ ಸಭೆಯಲ್ಲಿ ವಿವಿಧ ವಿಷಯಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಲಾಯಿತು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಿ. ಯತಿರಾಜುರವರು ಭಾರತದ ರಾಷ್ಟ್ರೀಯ ಸುರಕ್ಷತೆ, ಐಕ್ಯತೆ ಮತ್ತು ವಿಶ್ವಶಾಂತಿಯ ರಕ್ಷಣೆ ಬಗ್ಗೆ, ನಂತರ ಜಿ. ರಾಮಕೃಷ್ಣ 'ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ 75 ವರ್ಷಗಳು' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿದರು.

ನಂತರ ಪ್ರಪಂಚವನ್ನು ಅಣುವಿನಾಶಕ್ಕೊಳಗಾಗದಂತೆ ರಕ್ಷಿಸಲು ಬದ್ಧವಾದ ಸೋವಿಯೆತ್ ಶಾಂತಿ ಯೋಜನೆಯನ್ನು ಸ್ವಾಗತಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಪದಾಧಿಕಾರಿಗಳು

ಅಖಿಲ ಭಾರತ ಶಾಂತಿ ಸೌಹಾರ್ದತಾ ಸಂಘಟನೆಯ ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷೀಯ ಮಂಡಳಿ ಸದಸ್ಯರಾಗಿ ಕಾ||ಪಿ. ರಾಮಚಂದ್ರರಾವ್, ಉಪಾಧ್ಯಕ್ಷರಾಗಿ ಕಾ|| ಎಸ್. ಸೂರ್ಯನಾರಾಯಣರಾವ್ ಕಾರ್ಯದರ್ಶಿಗಳಲ್ಲೊಬ್ಬರಾಗಿ ಕಾ|| ಎಸ್.ಆರ್. ಆರಾಧ್ಯ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ 14 ಮಂದಿ ಪಕ್ಷದ ಮುಖಂಡರು ಕಾರ್ಯಕಾರಿ ಮಂಡಳಿಗೆ ಆಯ್ಕೆಯಾಗಿದ್ದಾರೆ.

"ತೀಕದಿರ್" ಬೆಳವಣಿಗೆಯ ಹೊಸ ಹಂತದಲ್ಲಿ

ಸಿ.ಪಿ.ಐ.(ಎಂ)ನ ತಮಿಳುನಾಡು ರಾಜ್ಯ ಸಮಿತಿಯ ಮುಖಪತ್ರವಾದ 'ತೀಕದಿರ್' ಬೆಳವಣಿಗೆಯ ಹೊಸ ಘಟ್ಟವನ್ನು ಪ್ರವೇಶಿಸಿದೆ. ಇದು ತಮಿಳುನಾಡಿನ ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೂ ಕಾರ್ಮಿಕ ವರ್ಗಕ್ಕೂ ಹೆಮ್ಮೆ ತರುವಂತಹ ಸಂಗತಿ ಇದಾಗಿದೆ. ಇದೇ ಜುಲೈ 18ರಂದು ಮಧುರೈನಲ್ಲಿ ಹೊಸ ವೆಬ್ ಆಫ್‌ಸೆಟ್ ಮುದ್ರಣಾಲಯ ಪ್ರಾರಂಭಗೊಂಡು ಮುಂದಿನ ಸಂಚಿಕೆಗಳನ್ನು ಪ್ರಕಟನೆಗೆ ಸಜ್ಜುಗೊಳಿಸಲಿದೆ. ಜುಲೈ 18ರಂದು ನಡೆಯಲಿರುವ ಬೃಹತ್ ಬಹಿರಂಗ ಸಭೆಯಲ್ಲಿ ಕೇರಳದ ಮುಖ್ಯಮಂತ್ರಿ ಕಾ|| ಇ.ಕೆ. ನಾಯನಾರ್‌ರವರು ಹೊಸ ಮುದ್ರಣಾಲಯವನ್ನು ಉದ್ಘಾಟಿಸಲಿದ್ದಾರೆ. ತಮಿಳುನಾಡಿನಲ್ಲಿ ಬೆಳೆದು ಬರುತ್ತಿರುವ ಎಡಶಕ್ತಿಯ ಮತ್ತು ಕಾರ್ಮಿಕ ವರ್ಗದ ಒಂದು ಪ್ರತಿಫಲನ ಪಕ್ಷದ ಪತ್ರಿಕೆ ಹೊಸ ಆಯಾಮವನ್ನು ಪ್ರವೇಶಿಸುತ್ತಿರುವುದರಲ್ಲಿ ಕಂಡು ಬರುತ್ತಿದೆ.

ಪಕ್ಷದ ಅಭಿಮಾನಿಗಳಿಂದ 20 ಲಕ್ಷ ರೂ. ಸಂಗ್ರಹಿಸಿ ಹೊಸ ಮುದ್ರಣಾಲಯದಿಂದ ಹೊಸ ರೂಪದಲ್ಲಿ ತೀಕದಿರ್ ಹೊರಬರಲಿದೆ. ಬೆಳೆಯುತ್ತಿರುವ ಎಡ ಶಕ್ತಿಗಳ ದಿಕ್ಸೂಚಿಯಾಗಲಿದೆ.

1949-50ರ ಸುಮಾರಿನಲ್ಲಿ ತಮಿಳುನಾಡಿನ ಕಮ್ಯುನಿಸ್ಟ್ ಚಳುವಳಿ ಬಲಿಷ್ಠವಾಗಿ ಬೆಳೆದು ಬರುತ್ತಿದ್ದಾಗ ಪಕ್ಷದ ಪತ್ರಿಕೆಯಾಗಿ 'ಜನಶಕ್ತಿ' ಉತ್ತಮ ಪ್ರಸಾರವನ್ನು ಹೊಂದಿತ್ತು. ಆದರೆ 1960ರ ಆರಂಭದಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಡಕು ಪ್ರಾರಂಭವಾಗಿ ಪರಿಷ್ಕರಣವಾದಿಗಳ ಹಿಡಿತಕ್ಕೆ 'ಜನಶಕ್ತಿ' ಒಳಪಟ್ಟಿತು. ಪರಿಷ್ಕರಣವಾದದ ವಿರುದ್ಧ ಹೋರಾಟವು ಹಿಂದಿನಿಂದಲೇ ನಡೆಯುತ್ತಿದ್ದಾಗ್ಯೂ ಕೂಡ 1960ರ ಹೊತ್ತಿಗೆ ಅದು ಸ್ಪಷ್ಟವಾದ ರೂಪವನ್ನು ಪಡೆದುಕೊಂಡಿತು. ಪಕ್ಷದೊಳಗಿನ ಭಿನ್ನಾಭಿಪ್ರಾಯಗಳನ್ನು ಮುಚ್ಚಿಡಲಾಗದ ಹಂತವನ್ನು ತಲುಪಿತು. ಈಗ ಸಿ.ಪಿ.ಐ.(ಎಂ) ಕಾರ್ಯಕರ್ತರಾಗಿರುವವರನ್ನು ಎಡಪಂಥೀಯರೆಂದು ಬಹಿರಂಗವಾಗಿ ಟೀಕಿಸಲಾಗುತ್ತಿತ್ತು. ಇಂಥದೊಂದು ಸಂದರ್ಭದಲ್ಲಿ ಪರಿಷ್ಕರಣವಾದದ ವಿರುದ್ಧ ಹೋರಾಟ ನಡೆಸಲು ಪಕ್ಷದ ತಾತ್ವಿಕ ನಿಲುವುಗಳನ್ನು ಪ್ರಚಾರ ಮಾಡಲು ಪತ್ರಿಕೆಯೊಂದರ ಅವಶ್ಯಕತೆಯನ್ನು ಕಾರ್ಯಕರ್ತರು ಮನಗಂಡರು. ಕಮ್ಯುನಿಸ್ಟ್ ಪಕ್ಷದ ಪರಂಪರೆಯನ್ನು ಎತ್ತಿಹಿಡಿಯುವಂತಹ, ರಾಜ್ಯದಲ್ಲಿ ನಿಜವಾದ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವ ಮಹತ್ವಾಕಾಂಕ್ಷೆಯೊಂದಿಗೆ 'ತೀಕಥಿರ್' ಪತ್ರಿಕೆ ಪ್ರಾರಂಭಗೊಂಡಿತು. ಸಿ.ಪಿ.ಐ.(ಎಂ)ನ ಬೆಳವಣಿಗೆ ಮತ್ತು ತೀಕಥಿರ್‌ನ ಬೆಳವಣಿಗೆ ಒಂದಕ್ಕೊಂದು ಪೂರಕವಾಗಿದೆ.

ಐಕ್ಯರಂಗಕ್ಕೆ ಕಾಣಿಕೆ

ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸದಸ್ಯರೂ, ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ (ಸಿ.ಐ.ಟಿ.ಯು.) ಪ್ರಧಾನ ಕಾರ್ಯದರ್ಶಿಯೂ ಆದ ಕಾ। ಮಹಮ್ಮದ್ ದಸ್ತಗೀರ್‌ರವರ ಮಗ ಮಹಮ್ಮದ್ ಅಯೂಬ್‌ರವರ ಮದುವೆ ಗೌಹರ್ ತಾಜ್‌ರವರೊಡನೆಯೂ ಹಾಗೂ ಮಗಳಾದ ಬಷೀರಾರವರ ಮದುವೆಯು ಮುಸೀರ್ ಪಾಷರವರೊಡನೆ ದಿನಾಂಕ 25.6.1986ರಂದು ಬೆಂಗಳೂರಿನಲ್ಲಿ ನೆರವೇರಿತು, ಇವರಿಗೆ ಐಕ್ಯರಂಗ ತನ್ನ ಶುಭಾಶಯಗಳನ್ನು ಸಲ್ಲಿಸುತ್ತದೆ. ತಮ್ಮ ಮಕ್ಕಳ ಮದುವೆಯ ಸವಿ ನೆನಪಿಗಾಗಿ ಐಕ್ಯರಂಗಕ್ಕೆ ಕಾ.ದಸ್ತಗೀರ್‌ರವರು 200 ರೂಪಾಯಿ ಕಾಣಿಕೆ ನೀಡಿದ್ದಾರೆ.

ವಿವಾಹ

ಶ್ರೀ ಚನ್ನಬಸವಣ್ಣ ಮತ್ತು ಶ್ರೀಮತಿ ಪ್ರಮೀಳ ಅವರ ವಿವಾಹ ತುಮಕೂರಿನಲ್ಲಿ ಶಾಸ್ತ್ರೀಯ ಪದ್ಧತಿಗಳನ್ನು ತಿರಸ್ಕರಿಸಿ ಸರಳ ರೀತಿಯಲ್ಲಿ ನಡೆಯಿತು. ಸಿ.ಪಿ.ಐ.(ಎಂ) ಮುಖಂಡರುಗಳಾದ ಕಾ|| ಹೆಚ್.ಸಿ. ಚನ್ನಪ್ಪ, ಕಾ||ಬಿ.ಡಿ. ರಾಮಯ್ಯ ಅವರುಗಳು ಸಮಾರಂಭದಲ್ಲಿ ಭಾಗವಹಿಸಿ ಸರಳ ವಿವಾಹವನ್ನು ಶ್ಲಾಘಿಸಿದರು.

ಪೋಸ್ಟ್ ಸೇವೆಯ ಖಾಸಗೀಕರಣಕ್ಕೆ ತಡೆ

ರಾಜೀವಗಾಂಧಿ ಸರ್ಕಾರ ದೇಶಾದ್ಯಂತ ಹಬ್ಬಿರುವ ಪೋಸ್ಟ್ ಆಫೀಸ್ ಸೇವೆಯನ್ನು ಖಾಸಗೀಕರಣ ಗೊಳಿಸುತ್ತಿತ್ತು. ಕಾಂಗ್ರೆಸ್ ಒಳಗೊಂಡು ದೇಶದ ಪೋಸ್ಟ್ ನೌಕರರ ನಾಲ್ಕು ಫೆಡರೇಷನ್‌ಗಳು ಜಂಟಿಯಾಗಿ ಜೂನ್ 14 ರಂದು ಮುಷ್ಕರ ಹೂಡುವ ನೋಟಿಸು ಕೊಟ್ಟಿದ್ದವು, ಸಂಯುಕ್ತ ಚಳುವಳಿಗೆ ಹೆದರಿದ ಕೇಂದ್ರ ಸರ್ಕಾರ ತಾ.9ರಂದು ಯೂನಿಯನ್ ಮುಖಂಡರೊಡನೆ ಚರ್ಚಿಸಿ ಹೆಚ್ಚಿನ ಬೇಡಿಕೆಗಳಿಗೆ ಒಪ್ಪಿಗೆ ನೀಡಿದೆ. ಪೋಸ್ಟ್ ಸೇವೆಯ ಖಾಸಗೀಕರಣವನ್ನು ನಿಲ್ಲಿಸುವುದು, ಖಾತೆಯೇತ್ತರ ಕೆಲಸಗಾರರಾಗಿ ದುಡಿಯುವವರ ಸಂಬಳವನ್ನು ಹೆಚ್ಚಿಸುವುದು, ಹಳ್ಳಿಗಳಲ್ಲಿ ಈಗ 3 ಗಂಟೆ ಕೆಲಸ ಮಾಡುತ್ತಿರುವ ಪೋಸ್ಟ್ ಆಫೀಸ್‌ಗಳನ್ನು ಮುಂದುವರಿಸಿ ಇನ್ನೂ ಹೆಚ್ಚಿಗೆ ಅಂಥ ಪೋಸ್ಟ್ ಆಫೀಸುಗಳನ್ನು ತೆಗೆಯುವುದು, ಬೋನಸ್ ಹೆಚ್ಚಿಸುವುದು. ಆರ್.ಡಿ.ಐ. ಮತ್ತು ಹಂಗಾಮಿ ನೌಕರರನ್ನು ಕಾಯಂ ಗೊಳಿಸುವುದು ಮುಂತಾದ ಬೇಡಿಕೆಗಳಿಗೆ ಒಪ್ಪಿಕೊಳ್ಳಲಾಗಿದೆ. ಈ ಹೋರಾಟದಿಂದಾಗಿ ಗ್ರಾಮಾಂತರ ಪ್ರದೇಶದ ಲಕ್ಷಾವಧಿ ಪೋಸ್ಟ್ ಆಫೀಸುಗಳೂ, ಅವುಗಳಲ್ಲಿ ಕೆಲಸ ಮಾಡುವವರ ನೌಕರಿ ಕಾಯಂ ಆದಂತಾಗಿದೆ. ಮುಖ್ಯವಾಗಿ ಕೆಳವರ್ಗದ ನೌಕರರಿಗೂ ಸಾರ್ವಜನಿಕರಿಗೂ ಈ ಒಪ್ಪಂದದ ಹೆಚ್ಚಿನ ಲಾಭ ದೊರೆತಂತಾಗಿದೆ.

ಪೋಸ್ಟ್ ನೌಕರರ ಐಕ್ಯ ಹೋರಾಟದಿಂದಾಗಿ ಕಾಯಂ ಕೆಲಸದಲ್ಲಿರುವ ನೌಕರರಿಗೆ ಮಾತ್ರವಲ್ಲ ಅರ್ಧಕಾಲ, ಹಂಗಾಮಿ, ಆರ್.ಟಿ.ಪಿ, ಕೆಳದರ್ಜೆ ಕೆಲಸಗಾರರಿಗೂ ಹಾಗೆಯೇ ಹಳ್ಳಿಗಾಡಿನ ಜನರಿಗೂ ಲಾಭ ದೊರೆತಿದೆ.

ಭಯೋತ್ಪಾದಕರ ರಕ್ತದಾಹಕ್ಕೆ ಆಹುತಿ

ದೇಶದ ಐಕ್ಯತೆಯನ್ನು ರಕ್ಷಿಸಲು ಸದಾ ಮುನ್ನುಗ್ಗುವ ಸಿ.ಪಿ.ಐ.(ಎಂ) ಇನ್ನಿತರ ಎಡಶಕ್ತಿಗಳನ್ನು ತಮ್ಮ ಬಂದೂಕದ ಗುರಿಯಾಗಿಸಿ ಕೊಂಡಿರುವ ಖಾಲಿಸ್ತಾನಿ ಭಯೋತ್ಪಾದಕರು ಜುಲೈ ೩ರಂದು ಪಂಜಾಬ್ ರಾಜ್ಯ ಡಿ.ವೈ.ಎಫ್.ಐ. ಅಧ್ಯಕ್ಷರಾಗಿದ್ದ ಕಾ. ಗುರುನಾಮ್ ಸಿಂಗ್ ಉಪ್ಪಲ್ ಅವರನ್ನು ಬಲಿತೆಗೆದುಕೊಂಡಿದ್ದಾರೆ. ಇನ್ನೂ 30ರ ಹರೆಯದ ಈ ತರುಣ ಮುಖಂಡ ಸಿ.ಪಿ.ಐ.(ಎಂ) ನ ಅಮೃತಸರ ಜಿಲ್ಲಾ ಸಮಿತಿಯ ಸದಸ್ಯರೂ, ಉಪ್ಪಲ್ ಗ್ರಾಮದ ಸರಪಂಚರೂ ಆಗಿದ್ದು ಭಯೋತ್ಪಾದಕರ ವಿರುದ್ಧದ ಹೋರಾಟದಲ್ಲಿ ಜನತೆಯನ್ನು ಯಶಸ್ವಿಯಾಗಿ ಸಂಘಟಿಸುತ್ತಿದ್ದರು.

ಸಿ.ಪಿ.ಐ.(ಎಂ)ನ ಪೊಲಿಟ್ ಬ್ಯೂರೋದ ಪರವಾಗಿ ಕಾ.ಇ.ಎಂ.ಎಸ್. ಅವರು ಈ ಧೀರ ಹುತಾತ್ಮನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ಹುತಾತ್ಮ ಗುರುನಾಂಸಿಂಗ್ ಅವರ ಆದರ್ಶದಿಂದ ಸ್ಫೂರ್ತಿ ಪಡೆದು ಸಾಮ್ರಾಜ್ಯಶಾಹೀ ಪರವಾದ ಭಯೋತ್ಪಾದಕರ ವಿರುದ್ಧ ಸಮರವನ್ನು ಮುನ್ನಡೆಸಬೇಕೆಂದು ಕಾ.ಇ.ಎಂ.ಎಸ್. ಎಡ ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳಿಗೆ ಕರೆ ನೀಡಿದ್ದಾರೆ.

ಪತ್ರಿಕೆಗಳಲ್ಲಿ ಸಾಮ್ರಾಜ್ಯಶಾಹಿಗಳ ಕೈವಾಡ

ಜಿ. ಎನ್. ಮೋಹನ್

ನಾವು ದಿನ ದಿನಪತ್ರಿಕೆಗಳಲ್ಲಿ ನೂರಾರು ಸುದ್ದಿಗಳನ್ನು ಓದುತ್ತಿರುತ್ತೇವೆ. ಅವೆಲ್ಲಾ ನಿಜವೆಂದೇ ಮುಗ್ಧರಂತೆ ನಂಬುತ್ತೇವೆ. ಆದರೆ ಇವುಗಳ ಹಿಂದೆ ಒಂದು ಅಪಪ್ರಚಾರದ ಷಡ್ಯಂತ್ರವೇ ಇರುತ್ತವೆ ಎಂಬುದು ತಿಳಿಯದೇ ಹೋಗುತ್ತದೆ. ಈಗ ನಮ್ಮ ದೇಶದಲ್ಲಿ ಕಮ್ಯೂನಿಸ್ಟರ ಬಗ್ಗೆ ಪ್ರತಿಕೆಗಳ ಗುಂಪೊಂದು ದಿನ ನಿತ್ಯ ಮಸಿ ಬಳಿಯುವ ಅಪಪ್ರಚಾರ ಸಾಗಿದೆ. ಈ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಗಳು ಸುಳ್ಳುಸುದ್ದಿಗಳ ಕುಪ್ರಚಾರದ ಬಗ್ಗೆ ಒಂದು ಕ್ಷ-ಕಿರಣ.

'ನೀವು ಎಷ್ಟು ಹೆಚ್ಚು ದೊಡ್ಡ ಸುಳ್ಳು ಹೇಳುತ್ತೀರೋ ಅದನ್ನು ಹೆಚ್ಚು ಜನ ನಂಬುವ ಸಾಧ್ಯತೆಯಿದೆ' ಎನ್ನುತ್ತಾನೆ ಹಿಟ್ಲರನ ಪ್ರಚಾರ ಮಂತ್ರಿ ಗೋಬಲ್ಸ್. ಅಮೇರಿಕಾದ ಪಾಲಿಗಂತೂ ಇದು ನಿತ್ಯಸತ್ಯ. ದಿನ ನಿತ್ಯ ಹಾಡಿದ್ದೇ ಹಾಡಿ ಎಲ್ಲರನ್ನೂ ನಂಬಿಸಲು ಪ್ರಯತ್ನಿಸುವ ಅಮೇರಿಕಾ ತನ್ನ ದೇಶದಲ್ಲಿಯೇ ತನ್ನ ಸುದ್ಧಿ ಮಾಧ್ಯಮಗಳನ್ನೂ, ತನ್ನ ಅಧ್ಯಕ್ಷರನ್ನೂ ಜನ ನಂಬದ ಸ್ಥಿತಿಗೆ ಬಂದಿದೆ.

ಅಮೇರಿಕಾಗೆ ಇದು ಚೆನ್ನಾಗಿ ಗೊತ್ತು, ಆಂತೆಲೇ ಇದು ಕಾಲು ಹಾಕಿದ ಕಡೆಯೆಲ್ಲ ಈ ಸುಳ್ಳುಗಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುತ್ತದೆ. ಇಂದು ಪತ್ರಿಕೋಧ್ಯಮದಲ್ಲೂ ಅಷ್ಟೇ ಅಮೇರಿಕಾ ಸಾವಿರ ಸುಳ್ಳುಗಳನ್ನು ಹರಡುತ್ತಿದೆ. ರೇಡಿಯೋ ತರಂಗಗಳಲ್ಲಿ ಸುಳ್ಳುಗಳ ಸರಮಾಲೆ. ಟಿವಿಯ ಅಣಿಮುತ್ತುಗಳಲ್ಲಿ ಸತ್ಯವನ್ನು ದೀಪ ಹಚ್ಚಿಕೊಂಡು ಹುಡುಕಬೇಕಾದ ಪರಿಸ್ಥಿತಿ. ಪತ್ರಿಕೋದ್ಯಮವೂ ಸಹ ಸಾವಿರ ಸುಳ್ಳುಗಳ ಸರದಾರ. ಅಮೇರಿಕಾದ ಸಾಮ್ರಾಜ್ಯಶಾಹಿ. ತತ್ವಕ್ಕೆ ಸುಳ್ಳುಗಳೆಂಬ ಅಂಗರಕ್ಷಕರು.

ಪತ್ರಿಕೋದ್ಯಮ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ. ಪ್ರಜಾಪ್ರಭುತ್ವ ಮತ್ತು ಸತ್ಯದ ವರದಿಗಾರನಾದ ಪತ್ರಿಕೋದ್ಯಮಕ್ಕೆ ಸಂವಹನ ಕ್ಷೇತ್ರದ ಮೈಲಿಗಲ್ಲು. ಪತ್ರಿಕೋದ್ಯಮದ ಶಕ್ತಿಯ ಸ್ವರೂಪ ರೇಗನ್‌ರವರಿಗೆ ಗೊತ್ತಿರುವುದರಿಂದಲೇ ಅವರು ಪತ್ರಿಕೆ, ಟಿವಿಗಳ ವೀರರಾಗಿ ಮೆರೆಯುತ್ತಿದ್ದರು. ತಾವು ಹೇಳುವ ಸುಳ್ಳುಗಳೆಲ್ಲಾ ಸತ್ಯದ ಅಂತಿಮ ಸ್ವರೂಪ ಎಂದು ನಂಬಿಸಲು ಶಕ್ತರಾಗಿದ್ದರು, ಇರಾನ್ ಕಾಂಟ್ರಾ ಹಗರಣದ ಕೊಳಚೆ ಬಹಿರಂಗವಾಗುವವರೆಗೂ.

> 'ಬಹಳ ಸಮಯದಿಂದ ನಾನು ಓದಿದ ಅತ್ಯಂತ ಖೇದಕರವಾದ ಘಟನೆಗಳಲ್ಲಿ ಇದೂ ಒಂದು. ನಮ್ಮ ಸರಕಾರ ಪತ್ರಿಕೆಗಳಿಗೆ ಹೇಗೆ ಸುಳ್ಳು ಹೇಳುವುದೆಂದು ಹೊಂಚು ಹಾಕುತ್ತಿರುವುದನ್ನು ನೋಡಿದರೆ ನನಗೆ ವಾಕರಿಕೆ ಬರುತ್ತದೆ'.

ಪತ್ರಿಕೆಗಳನ್ನು, ಸಂವಹನ ಕ್ಷೇತ್ರವನ್ನು ತನ್ನ ಕೈನಲ್ಲಿ ಹಿಡಿದಿಟ್ಟುಕೊಂಡರೆ ಅದು ಹೊಂದಿರುವ ಕೋಟಿಗಟ್ಟಲೆ ಜನರನ್ನು ಸುಲಭವಾಗಿ ಸವಾರಿ ಮಾಡಬಹುದು ಎಂದು ಅಮೇರಿಕಾದ ಯೋಜನೆ. ಈ ಪತ್ರಿಕೋದ್ಯಮದ ಬೆನ್ನೆಲುಬು ವಾರ್ತಾಸಂಸ್ಥೆಗಳು. ವಾರ್ತಾಸಂಸ್ಥೆಗಳು ಸುದ್ಧಿ ಹರಡುವ ಮಿದುಳಾದ್ದರಿಂದ ಅದನ್ನೇ ಕಲುಷಿತಗೊಳಿಸಿಬಿಟ್ಟರೆ ಇಡೀ ವಿಶ್ವದಲ್ಲಿ ಕ್ಷಣದೊಳಗೆ ತಮಗೆ ಬೇಕಾದ ವರದಿಗಳು ಪ್ರಕಟವಾಗುತ್ತವೆ.

ಸುಳ್ಳುಗಳ ಸರಮಾಲೆ

ತಪ್ಪು ವರದಿಗಳು ಸಮಾಚಾರ ಸಾಮ್ರಾಜ್ಯವಾದದ ಮೊದಲ ಹಂತ. ಹವಾನದಲ್ಲಿ ನಡೆದ ಆರನೆಯ ಅಲಿಪ್ತ ರಾಷ್ಟ್ರಗಳ ಸಮ್ಮೇಳನದ ಸಮಯದಲ್ಲಿ ಅಮೇರಿಕಾದ 'ಟೈಮ್' ಪತ್ರಿಕೆ ರಷ್ಯನ್ನರು ಹಲವಾರು ಹೊರವಲಯದಲ್ಲಿ ಆ್ಯಂಟೆನಾಗಳನ್ನು ಗುಪ್ತವಾಗಿ ಹಾಕಿರುವುದನ್ನು ಪತ್ತೆ ಹಚ್ಚಿದ್ದೇವೆ ಎಂದು ಹೇಳಿ ಒಂದು ಫೋಟೋ ಪ್ರಕಟಿಸಿತು. ಆದರೆ ನಿಜವಾಗಿ ಇವು 1950 ರ ದಶಕದಲ್ಲಿ ಹವಾನಕ್ಕೆ ನ್ಯೂಯಾರ್ಕ್ ಬೇಸ್‌ಬಾಲ್ ಆಟಗಳನ್ನು ಪ್ರಸಾರ ಮಾಡುವುದಕ್ಕಾಗಿ ಕಟ್ಟಲ್ಪಟ್ಟ ಏಟಟ ಆ್ಯಂಟೆನಾಗಳು. ಅದೇ ರೀತಿ ಜನರಲ್ ಹೇಗ್ ಪತ್ರಿಕಾ ಗೋಷ್ಠಿಯೊಂದರಲ್ಲಿ ನಿಕರಾಗುವಾದಲ್ಲಿ ಸ್ಯಾಂಡಿನಿಸ್ಟ ಬೆಂಬಲಿಗರು ತಮ್ಮ ವಿರೋಧಿಗಳ ಶವಗಳ ರಾಶಿಯನ್ನು ಸುಡುವ ಚಿತ್ರಗಳನ್ನು ತೋರಿಸಿದರು. ನಿಕರಾಗುವಾದ ಸ್ವಾತಂತ್ರ್ಯರಕ್ಷಕರ ವಿರುದ್ಧ ಈ ಸಮಯದಲ್ಲಿ ಅತ್ಯಂತ ಪ್ರಬಲವಾದ ಟೀಕೆಗಳು ಕೇಳಿಬಂದವು. ಆದರೆ ಆ ಚಿತ್ರಗಳು ರೆಡ್ ಕ್ರಾಸ್ ಕಾರ್ಯಕರ್ತರು ಭೂಕಂಪದಲ್ಲಿ ಮಡಿದವರ ಶವಗಳನ್ನು ಆರೋಗ್ಯದ ಕಾರಣಗಳಿಗಾಗಿ ಸುಡುತ್ತಿದ್ದ ಚಿತ್ರವಾಗಿತ್ತು.

ಇತ್ತೀಚಿನ 'ಲಿಬ್ಯಾ' ಘಟನೆಯೂ ಇದಕ್ಕೆ ಹೊರತಲ್ಲ. ಲಿಬ್ಯಾದಲ್ಲಿ ಗಡಾಫಿಗೆ ಜನ ಬೆಂಬಲವೇ ಇಲ್ಲ ಎಂಬ ಸುದ್ದಿಗಳನ್ನು ಅಮೇರಿಕಾದ ಖ್ಯಾತ ಪತ್ರಿಕೆ 'ವಾಲ್ ಸ್ಟ್ರೀಟ್ ಜರ್ನಲ್' ಪ್ರಕಟಿಸಿದವು. ಈ ಬೆನ್ನಿನಲ್ಲಿಯೇ ಲಿಬ್ಯಾಕ್ಕೆ ಸಂಬಂಧಿಸಿದಂತೆ ಸುಮಾರು ಸುಳ್ಳು ವರದಿಗಳು ಬಂದವು. ಅಮೇರಿಕಾದ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ಜಾರ್ಜ್ ಪಿ. ಶುಲ್ಟ್ಸ್‌ರವರನ್ನು ಕೇಳಿದಾಗ 'ನಾವು' ಗಡಾಫಿಯವರನ್ನು ನರ್ವಸ್ ಮಾಡುವ ಸಾಧ್ಯತೆಗಳಿದ್ದಲ್ಲಿ ನಾವ್ಯಾಕೆ ಅದನ್ನು ಮಾಡಬಾರದು ಎಂದು ಉತ್ತರಕೊಟ್ಟರು.

ಇತ್ತೀಚೆಗೆ ಸಮಾಜವಾದಿ ರಷ್ಯಾವನ್ನು ಟೀಕಿಸಲು ಎಲ್ಲರಿಗೂ ಸಿಕ್ಕ ಮುಖ್ಯ ಅಸ್ತ್ರ 'ಚರ್ನೋಬಿಲ್ ದುರಂತ'. ಅಮೇರಿಕಾ ಈ ದುರಂತಕ್ಕೆ ಸಂಬಂಧಿಸಿದಂತೆ ತನ್ನ ಪತ್ರಿಕೆಗಳಲ್ಲಿ ಚೆರ್ನೋಬಿಲ್ ಅಣುಸ್ಥಾವರದ್ದು ಎನ್ನಲಾದ ಫೋಟೋಗಳನ್ನು ಪ್ರಕಟಿಸಿದವು. ಆದರೆ ಅದು ನಿಜವಾಗಿ ಯುಗೋಸ್ಲೋವಿಯಾದ ಕಾರ್ಖಾನೆ ದುರಂತಕ್ಕೀಡಾದ ಚಿತ್ರ.

ಈ ತಪ್ಪು ಸುದ್ದಿಗಳ ಘಟನೆಗಳ ಬಗ್ಗೆ ಬರೆಯುತ್ತಾ 'ನ್ಯೂಯಾರ್ಕ್‌ಟೈಮ್ಸ್'ನ ಕಾರ್ಯ ನಿರ್ವಾಹಕ ಸಂಪಾದಕರು 'ಬಹಳ ಸಮಯದಿಂದ ನಾನು ಓದಿದ ಅತ್ಯಂತ ಖೇದಕರವಾದ ಘಟನೆಗಳಲ್ಲಿ ಇದೂ ಒಂದು. ನಮ್ಮ ಸರಕಾರ ಪತ್ರಿಕೆಗಳಿಗೆ ಹೇಗೆ ಸುಳ್ಳು ಹೇಳುವುದೆಂದು ಹೊಂಚು ಹಾಕುತ್ತಿರುವುದನ್ನು ನೋಡಿದರೆ ನನಗೆ ವಾಕರಿಕೆ ಬರುತ್ತದೆ' ಎಂದಿದ್ದಾರೆ.

ಇತ್ತೀಚಿನ ಚೀನಾದ ವಿದ್ಯಾರ್ಥಿ ಮುಷ್ಕರದ ಪ್ರಕರಣವನ್ನೇ ತೆಗೆದುಕೊಳ್ಳಿ. ಚೀನಾದಲ್ಲಿ ನಡೆದ ವಿದ್ಯಾರ್ಥಿ ಮೆರವಣಿಗೆಯನ್ನು ಎಲ್ಲಾ ಪತ್ರಿಕೆಗಳು 1949 ರ ನಂತರ ಚೀನಾದ ಅತ್ಯಂತ ಮಹತ್ವದ ಮೆರವಣಿಗೆ ಎಂದು ಬಣ್ಣಿಸಿದವು. ಚೀನಾದ ಬೃಹತ್ ಮುಷ್ಕರದಲ್ಲಿ ಭಾಗವಹಿಸಿ, ನಾಯಕರ ಭಾಷಣಗಳಿರುವ ಪತ್ರಿಕೆಗಳನ್ನು ಸುಟ್ಟುಹಾಕಿ ಎಂದು ಬೀಜಿಂಗ್ ವಿಶ್ವವಿದ್ಯಾಲಯದ ಮುಂದೆ ಇರುವ ಭಿತಿಪತ್ರಗಳು ಕರೆಕೊಟ್ಟವು. ಆದರೆ ಈ ಭಿತ್ತಿಪತ್ರಗಳೆಲ್ಲವೂ 'ವಾಯ್ಸ್ ಆಫ್ ಅಮೇರಿಕಾ'ದ ವಾರ್ತೆಗಳನ್ನು ಅಲ್ಲಿ ಉದ್ಧರಿಸಿದ್ದವು ಅಷ್ಟೆ. ಚೀನಾದ ವಿದ್ಯಾರ್ಥಿಗಳಿಗೆ ಇಂತಹದೊಂದು ಮೆರವಣಿಗೆ ಚೀನಾದಲ್ಲಿ ನಡೆಯುತ್ತಿದೆ ಎಂದು ಗೊತ್ತಾದದ್ದು 'ವಾಯ್ಸ್ ಆಫ್ ಅಮೇರಿಕಾ'ದ ಮೂಲಕ. ನನ್ನೊಡನೆ ಇರುವ ನನ್ನ ಹೆಂಡತಿ ಸತ್ತರೆ ಅದು ಗೊತ್ತಾಗಬೇಕಾದದ್ದು ವಿದೇಶದಲ್ಲಿರುವ ಗೆಳೆಯನ ಮೂಲಕ ಎಂಬಂತೆ.

ಸಿ.ಐ.ಎ ಪತ್ರಕರ್ತರು

ಇಂದು ಹಲವು ಪತ್ರಕರ್ತರು ಛಾಯಾಗ್ರಾಹಕರು ಅಮೇರಿಕಾದ ಮಡಿಲಲ್ಲಿದ್ದಾರೆ. 1950 ರಿಂದ 70 ರವರೆಗೆ ಅಮೇರಿಕಾದ ಗುಪ್ತಚರ ಸಂಸ್ಥೆಗಳೇ ಸೇರಿ 'ಪೇರಂವರ್ಲ್ಡ್ ಫೀಚರ್', ಎಂಬ ಸುದ್ದಿ ಸಂಸ್ಥೆಯನ್ನು ನಡೆಸುತ್ತಿದ್ದವು. ಅಮೇರಿಕಾದಸಮೂಹ ಮಾಧ್ಯಮ ವಿಶ್ಲೇಷಣಾ ಸಂಸ್ಥೆಯ ವಿಲಿಯಂ ಸ್ಕ್ಯಾಪ್ ಹೇಳುವಂತೆ ಸಿ.ಐ.ಎ. ಇಂದು ಪ್ರಪಂಚದಾದ್ಯಂತ ನೂರಾರು ಮಂದಿ ಪತ್ರಕರ್ತರನ್ನು ಹೊಂದಿವೆ. ಈ ಸಂಖ್ಯೆ ಎಪಿ,ಯುಪಿಐ, ರಾಯಿಟರ್ ಮತ್ತು ಟಾಸ್ ವಾರ್ತಾ ಸಂಸ್ಥೆಗಳಲ್ಲಿ ಇರುವವಿದೇಶಿವರದಿಗಾರರ ಒಟ್ಟು ಸಂಖ್ಯೆಗಿಂತ ಹೆಚ್ಚು.

ಸುದ್ದಿಸಂಸ್ಥೆಗಳಿಗೆ ತಪ್ಪುವರದಿಗಳನ್ನು ಸರಬರಾಜು ಮಾಡುವುದೇ ಅಲ್ಲದೆ ಸಿ.ಐ.ಎ ತನ್ನದೇ ಆದ ವಾರ್ತಾ ಸಂಸ್ಥೆಗಳನ್ನು ಹೊಂದಿದೆ. 'ಇಂಟರ್ ನ್ಯಾಷನಲ್ ಹೆರಾಲ್ಡ್ ಟ್ರಿಬ್ಯೂನ್', ಪ್ರಕಾರ ಸಿ.ಐ.ಎ 800 ಸುದ್ದಿ ಸಂಸ್ಥೆಗಳನ್ನು ಹಾಗೂ 400 ಪತ್ರಿಕೆಗಳನ್ನು ತನ್ನ ಕೈನಲ್ಲಿಹಿಡಿದುಕೊಂಡು ಅವುಗಳ ಮೂಲಕ ಸುಳ್ಳು ವರದಿಗಳನ್ನು ಪ್ರಪಂಚದಾದ್ಯಂತ ಪ್ರಸಾರ ಮಾಡುತ್ತದೆ.

ಪ್ರಚಾರ ಅವಿಭಾಜ್ಯ ಅಂಗ

ಅಮೇರಿಕಾದ ವಾರ್ತಾಸಂಸ್ಥೆ ಯು.ಎಸ್.ಐ.ಎ. ಒಂದೇ ಇಂದು 885 ಮಿಲಿಯ ಡಾಲರ್‌ಗಳನ್ನು ಕೇವಲ ಸುದ್ದಿಪ್ರಚಾರಕ್ಕಾಗಿ ಮಾತ್ರವೇ ಬಳಸುತ್ತಿದೆ. ಇದರಲ್ಲಿ 550 ಮಿಲಿಯ ಡಾಲರ್‌ಗಳನ್ನು ಪ್ರಪಂಚದ 126 ದೇಶಗಳಲ್ಲಿ ತಲಾ 206 ಕಛೇರಿಗಳನ್ನು ತೆರೆದಿದ್ದು ಅವುಗಳಿಗಾಗಿ ವೆಚ್ಚ ಮಾಡುತ್ತಿದೆ.

'ನಮ್ಮ ವಿದೇಶ ನೀತಿಗಳಲ್ಲಿ ಈ ಸುದ್ಧಿ ಸಂಸ್ಥೆಗಳನ್ನು ಹುಟ್ಟುಹಾಕುವಂತೆ ನಾವು ಹೇಳುತ್ತೇವೆ. ಪ್ರಚಾರ ನಮ್ಮ ಅವಿಬಾಜ್ಯ ಅಂಗ. ನಾವು ನಮ್ಮ ಮಾತು ಇಡೀ ಪ್ರಪಂಚದಲ್ಲಿ ಕೇಳುವಂತೆ ಮಾಡಬೇಕು. ಇದು ನಮ್ಮ ಮಿಲಿಟರೀಕರಣ ಹಾಗೂ ಆರ್ಥಿಕ ಸಹಾಯದಂತೆ ಅವಿಬಾಜ್ಯ ಅಂಗ' ಎನ್ನುವ ಅಮೇರಿಕಾದ ಟ್ರೂಮನ್ 'ನಾವು ಬಿಲಿಯ ಡಾಲರ್ ಗಟ್ಟಲೆ ಹಣವನ್ನು ಗನ್, ಬಾಂಬ್‌ಗಳ ಮೇಲೆ ಖರ್ಚು ಮಾಡಿದ್ದೇವೆ ಹಾಗೇ ಪ್ರಚಾರದ ಮೇಲೆ ಕೂಡ' ಎಂದಿದ್ದಾರೆ. ಅಮೇರಿಕಾ 35 ಸಾವಿರ ಜನರನ್ನು ಪ್ರಪಂಚದಾದ್ಯಂತ ಈ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದು ಅದಕ್ಕಾಗಿ 5 ಸಾವಿರ ಮಿಲಿಯ ಡಾಲರ್‌ಗಳನ್ನು ಖರ್ಚು ಮಾಡುತ್ತಿದೆ.

ಟ್ರಾನ್ಸ್‌ನ್ಯಾಷನಲ್ ಕಮುನಿಕೇಷನ್ ಟ್ರಸ್ಟ್

ರಾಷ್ಟ್ರಮಟ್ಟದಲ್ಲಿ ಸುದ್ದಿಸಂಸ್ಥೆಗಳನ್ನು ತನ್ನ ಕೈಯಲ್ಲಿಟ್ಟುಕೊಳ್ಳುವುದು ಒಂದು ಬಗೆಯಾದರೆ ಅಂತರಾಷ್ಟ್ರೀಯ ಮಟ್ಟದಲ್ಲಿ ಆ ಸುದ್ದಿ ಸಂಸ್ಥೆಗಳನ್ನು ಕೈಯಲ್ಲಿಟ್ಟುಕೊಳ್ಳುವ ಬೆಳವಣಿಗೆ ಮತ್ತೊಂದು ಮಜಲು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಅವೆಲ್ಲವೂ ತಮ್ಮ ಬೇರುಗಳನ್ನು ಅಮೇರಿಕಾದಲ್ಲೇ ಹೊಂದಿರುವುದು. ಈ ಸಂಸ್ಥೆಯನ್ನು ಕ್ಯೂಬಾದ ನಾಯಕ ಫಿಡಲ್ ಕ್ಯಾಸ್ಟ್ರೋ 'ಬಂಡವಾಳಶಾಹಿ ಜಗತ್ತಿನ ಪ್ರಮುಖ ವಕ್ತಾರರು' ಎಂದು ಕರೆದಿದ್ದಾರೆ. 1976 ರ ಹೊತ್ತಿಗೆ ಇಡೀ ಪ್ರಪಂಚಕ್ಕೆ ವಿತರಣೆಯಾಗುವ ಸುದ್ದಿಗಳಲ್ಲಿ 75 ಭಾಗ ಈ ಟ್ರಸ್ಟ್‌ನ ಅಂಗ ಸಂಸ್ಥೆಗಳಾದ 81 ಕಾರ್ಪೊರೇಷನ್‌ಗಳದ್ದಾಗಿತ್ತು.

[5ನೇ ಪುಟ ನೋಡಿ]

ಪತ್ರಿಕಾ ಸ್ವಾತಂತ್ರ್ಯದ ಅರ್ಥ

ಅತ್ಯುತ್ತಮ ಮುದ್ರಣಾಲಯಗಳು ಮತ್ತು ಅಗಾಧ ಪ್ರಮಾಣದ ಕಾಗದದ ಸಂಗ್ರಹ ಬಂಡವಾಳಶಾಹಿಗಳ ಮುಷ್ಟಿಯಲ್ಲಿರುವಾಗ "ಪತ್ರಿಕಾ ಸ್ವಾತಂತ್ರ್ಯ" ಎಂಬುದೊಂದು ಮೋಸ. ಬಂಡವಾಳಶಾಹಿಗಳ ಸಮಾಜದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಅರ್ಥ ಪತ್ರಿಕೆಗಳಿಗೆ ಲಂಚ ತಿನ್ನಿಸುವ ಬಂಡವಾಳಶಾಹಿಗಳ ಸ್ವಾತಂತ್ರ್ಯ ತಮ್ಮ ಸಂಪತ್ತನ್ನು ಸಾರ್ವಜನಿಕಾಭಿಪ್ರಾಯವನ್ನು ತಮಗೆ ಬೇಕಾದ ರೀತಿಯಲ್ಲಿ ರೂಪಿಸಲು ಬಳಸುವ ಸ್ವಾತಂತ್ರ್ಯ.

—ಲೆನಿನ್

ಲಂಚ ಪಡೆದು 'ಮಾಹಿತಿ' ಹಂಚಿದರು

ವಾಶಿಂಗ್ಟನ್‌ನಲ್ಲಿ ಇರಾನಿನ ರಾಯಭಾರಿಗೆ ಈ ಬಾಬ್ತು ಖರ್ಚುಮಾಡಲು 25000 ಡಾಲರು ಪ್ರತಿ ತಿಂಗಳಂತೆ ನೀಡಲಾಗುತ್ತಿತ್ತು.! ಹೀಗೆ ಲಂಚ ಪಡೆದವರಲ್ಲಿ ಜೋಸೆಫ್ ಕ್ರಾಫ್ಟ್, ರೌಲೆಂಡ್ ಈವನ್ಸ್, ರಾಬರ್ಟ್‌ನೋವಕ್, ಇತ್ಯಾದಿ ಅಮೆರಿಕನ್ ಪತ್ರಿಕಾ ರಂಗದ 'ದಿಗ್ಗಜ' ಗಳೂ ಸೇರಿದ್ದಾರೆ. ಪ್ರಸಿದ್ಧ ಪತ್ರಿಕೆ ವಾಶಿಂಗ್ಟನ್ ಪೋಸ್ಟ್‌ನ ಪತ್ರಕರ್ತರಿವರು. ಈ ರೀತಿ ಇತರ ಪತ್ರಿಕೆ ಮ್ಯಾಗಝಿನ್‌ಗಳ ಪತ್ರಕರ್ತರೂ ಲಂಚ ಪಡೆದವರ ಪಟ್ಟಿಯಲ್ಲಿದ್ದಾರೆ. ಜಗತ್ತಿನ ಎಲ್ಲಾ ವಾರ್ತಾ ಸಂಸ್ಥೆಗಳಿಗೆ ಶಹಾನ ಇರಾನ್ 'ಉಣ್ಣಿಸುತ್ತಿದ್ದವರು ಇವರೇ !

ಗೋರ್ಬಚೇವ್ ಎಚ್ಚರಿಕೆ

ಸಿ.ಪಿ.ಎಸ್.ಯು. ನ 27ನೇ ಕಾಂಗ್ರೆಸ್ ರಾಜಕೀಯ ವರದಿಯಲ್ಲಿ ಗೋರ್ಬಚೇವ್ ರವರು 'ಅಮೇರಿಕಾ ಇಂದುಮುಂದು ಮಾಡುತ್ತಿರುವ ಜನರ ಐಕ್ಯತೆ, ಸಂಸ್ಕೃತಿ ಹಾಗೂ ಚರಿತ್ರೆಯನ್ನು ಕಲುಷಿತಗೊಳಿಸುವ ಈಮನಸ್ಸುಗಳ ಮೇಲಿನಧಾಳಿಯನ್ನು ಸರಿಯಾಗಿ ನಿಗ್ರಹಿಸಲು ಸನ್ನದ್ಧರಾಗಬೇಕು. ಅಮೇರಿಕಾದ ಈ ತಂತ್ರ ಮುಕ್ತ ವಿಚಾರಗಳ ವಿನಿಮಯಕ್ಕಾಗಲಿ ಅಥವಾ ವಾಸ್ತವಸ್ಥಿತಿಯ ವರದಿಯಾಗಲಿ ಆಗಿರದೆ ರಾಜಕೀಯ ಮತ್ತು ಮಾನಸಿಕ ಯುದ್ಧಕ್ಕೆ ಸಜ್ಜಾಗುತ್ತಿರುವುದರ ಗುರುತು ಎಂದಿದ್ದಾರೆ.

ಭಾರತೀಯ ಪತ್ರಿಕೋದ್ಯಮದಲ್ಲಿ........

ಭಾರತಕ್ಕೆ ವಿದೇಶಗಳ ಅಂತರಾಷ್ಟ್ರೀಯ ಪರಿಸ್ಥಿತಿಯ ಸುದ್ಧಿ ಸರಬರಾಜು ಮಾಡುವ ಸುದ್ಧಿ ಸಂಸ್ಥೆಗಳಲ್ಲಿ ಅಗ್ರಪಾಲು ಅಮೇರಿಕಾದ ಎ.ಪಿ. ಹಾಗೂ ಇಂಗ್ಲೆಂಡಿನ ರಾಯಟರ್ಸ್ ಸಂಸ್ಥೆಗಳದ್ದು, ಅವು ಒತ್ತು ನೀಡುವ ಸುದ್ದಿಗಳಿಗೆ ಮಾತ್ರವೇ ಇಲ್ಲಿನ ಪತ್ರಿಕೆಗಳೂ ಮಹತ್ವ ನೀಡುತ್ತದೆ. ಉದಾಹರಣೆಗೆ 1981ರಲ್ಲಿ ಇಂಗ್ಲೆಂಡಿನ ರಾಜಕುಮಾರ ಚಾರ್ಲ್ಸ್ ಪ್ರಿನ್ಸ್ ಮತ್ತು ಲೇಡಿ ಡಯಾನರ ಮದುವೆಯ ಸುದ್ಧಿಯನ್ನು ಇಲ್ಲಿನ ವಾರ, ದಿನ, ಮಾಸಿಕ ಪತ್ರಿಕೆಗಳೆಲ್ಲವು, ಇನ್ನಿಲ್ಲದಂತೆ ಪ್ರಕಟಿಸಿದವು. ಅದು ಎಷ್ಟರ ಮಟ್ಟಿಗೆ ತೀವ್ರವಾಗಿತ್ತೆಂದರೆ ಅದೇ ಸಮಯದಲ್ಲಿ ಯೂನಿಸೆಫ್ ಭಾರತದಲ್ಲಿ ಪ್ರತೀ ನಿಮಿಷಕ್ಕೆ ಇಬ್ಬರಂತೆ ಮಕ್ಕಳು ಸಾಯುತ್ತಿದ್ದಾರೆಂದು ನೀಡಿದ ವರದಿ ಯಾವ ಪತ್ರಿಕೆಯ ಮೂಲೆಯಲ್ಲೂ ಗೋಚರವಾಗಲಿಲ್ಲ. ಏಕೆಂದರೆ ಈ ಸುದ್ಧಿ ಎ.ಪಿ. ಮತ್ತುಯು.ಪಿ.ಐ.ಗಳಿಗೆ ಮುಖ್ಯವಾದ ಸುದ್ಧಿಯಾಗಿರಲಿಲ್ಲ. ಆದ್ದರಿಂದ ಭಾರತಕ್ಕೂ ಇದು ಮುಖ್ಯವಾದ ಸುದ್ಧಿಯಾಗದೆ, ಈ ವರದಿ ಕ.ಬು.ವಿನಲ್ಲಿ ಸೇರಿಹೋಯಿತು. ಭಾರತದಲ್ಲಿ ಪ್ರತಿ ದಿನವೂ 40ಸಾವಿರ ಮಕ್ಕಳು ಹಸಿವಿನ ಮರಣ ಸುದ್ದಿಯಾಗದೇ ಹೋಯಿತು.

ಇದಕ್ಕೆ ಮುಖ್ಯ ಕಾರಣ ಪತ್ರಿಕೋಧ್ಯಮದಲ್ಲಿ ನೋಡುವ ಕಣ್ಣುಗಳಿಗೆ ಬಡಿದಿರುವ ಕಾಮಲೆ. ಎ.ಪಿ.,ಯು.ಪಿ.ಐ., ರಾಯಿಟರ್ಸ್‌ಕಣ್ಣುಗಳ ಮೂಲಕ ನೋಡುವ ಭಾರತೀಯ ಪತ್ರಿಕೋಧ್ಯಮದತ್ತ ಕಣ್ಣು ಹಾಯಿಸಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂದು ಭಾರತದ ಮುಖ್ಯ ಐದು ಪತ್ರಿಕೆಗಳು ಅಮೇರಿಕಾದಿಂದ ಪಡೆಯುತ್ತಿರುವ ಅಂತರಾಷ್ಟ್ರೀಯ ಸುದ್ಧಿಗಳ ಅಂಕೆ ಸಂಖ್ಯೆಗಳನ್ನು ನೋಡಿದರೆ ಗಾಬರಿಯಾಗುತ್ತದೆ

ನಮ್ಮ ಪತ್ರಿಕೆಗಳು ಪ್ರಕಟಿಸುವ ಹಲವು ಮಾಸ್ಕೋ ಸುದ್ಧಿಗಳು ಕೂಡ ಮಾಸ್ಕೋ ಮೂಲದ್ದಾಗಿರದೆ ಅಮೇರಿಕಾದ ವಾರ್ತಾ ಸಂಸ್ಥೆಗಳ ಮೂಲಕ ಅಮೇರಿಕಾದ ದೃಷ್ಟಿಕೋನವನ್ನು ಹೊಂದಿರುವ ಸುದ್ಧಿಗಳಾಗಿರುತ್ತದೆ. ಇದಲ್ಲದೆ ಲಂಡನ್‌ನಿಂದ ಬರುವ ಸುದ್ಧಿಗಳೂ ಸಹ ಹಲವು ಅಮೇರಿಕಾ ಮೂಲದ್ದಾಗಿರುತ್ತದೆ. ಶ್ರೀಲಂಕಾದ ಸಮಸ್ಯೆಯ ಬಗ್ಗೆ ಬಂಗ್ಲಾದೇಶದಂತಹ ನಮ್ಮ ನೆರೆಹೊರೆಯ ದೇಶಗಳ ಬಗ್ಗೆ ಕೂಡ ನಮಗೆ ಸಿಗುವ ಸುದ್ಧಿಯ ಮೂಲ ಅಮೇರಿಕಾದ ಸುದ್ಧಿ ಸಂಸ್ಥೆಗಳೇ ಇಂತಹ ಸಂದರ್ಭದಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿ ಹುಟ್ಟಡಗಿಸಲು ಪ್ರಯತ್ನಿಸುತ್ತಿರುವ ನಿಕರಾಗುವ ಬಗ್ಗೆ, ದ. ಆಫ್ರಿಕಾ ಹೋರಾಟದ ಬಗ್ಗೆ ನಿಜವಾದ ಸುದ್ಧಿಯನ್ನು ಹೇಳಿಯಾರೇ? ಈ ದ. ಆಫ್ರಿಕಾದ ಹೋರಾಟದ ಬಗ್ಗೆ ನಮ್ಮ ಪತ್ರಿಕೆಗಳೇಕೆ ಮೌನ ತಾಳಿವೆ. ಅಲ್ಲಿ ಹೋರಾಟ ನಿಂತುಹೋಗಿದೆ ಎಂಬ ಭಾವನೆ ಬರಿಸಲೆಂದೇ?

ಇದರಿಂದ ಮೊದಲು ಭಾರತದ ಪತ್ರಿಕೆಗಳ ಮೇಲೆ ಬ್ರಿಟಿಷರಿಗಿದ್ದ ಪ್ರಭುತ್ವ ಈಗ ಸ್ಪಷ್ಟವಾಗಿ ಅಮೇರಿಕಾದ ಕಡೆಗೆ ಜಾರಿದೆ. ನಮ್ಮ ಪತ್ರಿಕೆಗಳ ಪ್ರತೀ ಮೂರು ಕಾಲಂ ಸೆಂ.ಮೀ.ಗಳ ಸುದ್ಧಿಯಲ್ಲಿ ಒಂದು ಸುದ್ಧಿ ಅಮೇರಿಕಾದಿಂದ ಬಂದದ್ದಾಗಿರುತ್ತದೆ. ಈ ಅಮೇರಿಕಾದ ಸುದ್ಧಿಗಳಲ್ಲೂ ಎ.ಪಿ. ತನ್ನ ಪ್ರಭುತ್ವ ಹೊಂದಿದೆ. ಬ್ರಿಟಿಷರ ಕಾಲೋನಿಯಾಗಿದ್ದ ಭಾರತದ ಮೇಲೂ ಅಮೇರಿಕಾದ ಸುದ್ಧಿ ಸಂಸ್ಥೆಗಳು ನೇರ ಹಿಡಿತ ಸ್ಥಾಪಿಸಿರುವುದು ಅಮೇರಿಕಾ ಸಾಮ್ರಾಜ್ಯಶಾಹಿಯ ಜಾಲದ ವಿಸ್ತಾರ ಹಾಗೂ ಆಳಕ್ಕೆ ಪ್ರಪಂಚದಲ್ಲಿ ಎಲ್ಲಾ ಸಾಮ್ರಾಜ್ಯಶಾಹಿಗಳ ನಾಯಕನಾಗಿ ಅಮೇರಿಕಾ ವರ್ತಿಸುತ್ತಿರುವುದಕ್ಕೆ ಸಾಕ್ಷಿ. ●

ಗೂಢಚಾರಿ ಪತ್ರಕರ್ತರು

ಸರ್ಕಾರದ ಹೇಳಿಕೆ ಪ್ರಕಾರ ಅನೇಕ ಗೂಢಚಾರರು'ಪತ್ರಕರ್ತರು' ಮತ್ತು 'ಸಂಶೋಧಕರು' ಎಂದು ಹೇಳಿಕೊಂಡು ಬರುತ್ತಾರೆ. ಸಂಶೋಧಕರ ಹೆಸರಿನಲ್ಲಿ ಬರುವವರನ್ನು ಸೂಕ್ಷ್ಮ ಪ್ರದೇಶಗಳು ಬಿಡದೆ ನಿಗ್ರಹಿಸಬಹುದಾದರೂ ಪತ್ರಕರ್ತರ ಸೋಗಿನಲ್ಲಿ ಬರುವವರ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಅಸಹಾಯಕನಾಗಿದೆ.

—ಕುಲದೀಪ ನಯ್ಯರ್

ಖ್ಯಾತ ಅಂತರಾಷ್ಟ್ರೀಯ ಪತ್ರಕರ್ತ

ಅಂತರಾಷ್ಟ್ರೀಯ ಸುದ್ಧಿಗಳಲ್ಲಿ ವಿವಿಧ ಮೂಲಗಳು

ಪತ್ರಿಕೆಗಳು	ಅಮೇರಿಕಾ ಮೂಲದಿಂದ	ಲಂಡನ್ ಮೂಲದಿಂದ	ಮಾಸ್ಕೊ ಮೂಲದಿಂದ
ಟೈಮ್ಸ್ ಆಫ್ ಇಂಡಿಯಾ	ಶೇ. 52	ಶೇ. 38	ಶೇ. 6.4
ಹಿಂದೂ	ಶೇ. 60	ಶೇ. 25	ಶೇ. 8 4
ಸ್ಟೇಟ್ಸ್‌ಮನ್	ಶೇ. 41	ಶೇ. 49	ಶೇ. 3.9
ಇಂಡಿಯನ್ ಎಕ್ಸ್‌ಪ್ರೆಸ್	ಶೇ. 32	ಶೇ. 51	ಶೇ. 16
ಟೆಲಿಗ್ರಾಫ್	ಶೇ. 48	ಶೇ. 41	ಶೇ. 5.8

ಅಮೇರಿಕಾದ ಜಾಲಕ್ಕೆ ಉತ್ತರ

ಸಮಾಚಾರವನ್ನು ತನ್ನ ಬಗಲಿಗೆ ಹಾಕಿಕೊಳ್ಳಲು ಸಾಮ್ರಾಜ್ಯಶಾಹಿ ಅಮೇರಿಕಾ ತನ್ನದೇ ಆದ ಬಲೆನೇಯ ತೊಡಗಿತ್ತು. ಆದರೆ ಆ ಜಾಲವನ್ನು ಮುರಿಯುವ ನಿಟ್ಟಿನಲ್ಲಿ ಅಲಿಪ್ತ ಹಾಗೂ ಸಮಾಜವಾದಿ ರಾಷ್ಟ್ರಗಳು ತಮ್ಮದೇ ಆದ ಸಂವಹನ ವ್ಯವಸ್ಥೆಗೆ ದುಡಿದವು.

ಅಮೇರಿಕಾ, ಇಂಗ್ಲೆಂಡ್ ವಾರ್ತಾ ಸಂಸ್ಥೆಗಳ ನಿರಂತರ ಸುದ್ದಿ ಪ್ರವಾಹಗಳ ಮಧ್ಯೆಯೂ ಭಾರತದ ಪತ್ರಿಕೋಧ್ಯಮ ತನ್ನದೇ ಆದ ಸುದ್ದಿ ಸಂಸ್ಥೆಗಳನ್ನು ಹೊಂದುವಲ್ಲಿ ಯಶಸ್ವಿಯಾಗಿದೆ. ಯುಎನ್ಐ, ಪಿಟಿಐ ಭಾರತದ ಎರಡು ಪ್ರಮುಖ ವಾರ್ತಾ ಸಂಸ್ಥೆಗಳು. ಇವು ಭಾರತದ ಬಂಡವಾಳಶಾಹಿಯ ನಿಲುವಿಗೆ ಹೊಂದಿಕೆಯಾಗುವಂತೆ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯನ್ನು ಪ್ರಕಟಿಸುತ್ತವೆ.

ವಿದೇಶಿ ಸುದ್ದಿಗಳನ್ನು ಈ ಮೂಲದಿಂದ ಪಡೆಯುವ ಸಂಖ್ಯೆ ಅಷ್ಟೇನು ಗೌಣವಾಗಿಲ್ಲ. ಆದರೂ ಈ ಯುಎನ್ಐ, ಪಿಟಿಐಗಳೂ ಸಹ ಹಲವೊಮ್ಮೆ ಅಂತರಾಷ್ಟ್ರೀಯ ಸುದ್ದಿಗಳನ್ನು ಅಮೇರಿಕಾ, ಇಂಗ್ಲೆಂಡ್ ಮೂಲಗಳಿಂದಲೇ ತರಿಸಿಕೊಂಡಿರುತ್ತದೆ. ಈ ಮಧ್ಯೆ ಸಂಪಾದಕೀಯಗಳು, ಲೇಖನಗಳ, ಮೂಲಕ ಭಾರತೀಯ ಭಾಷೆಯ ಪತ್ರಿಕೆಗಳು ಸಹ ಅಮೇರಿಕಾ ಅಥವಾ ಇನ್ಯಾವುದೇ ಅಂತರಾಷ್ಟ್ರೀಯ ಸುದ್ದಿ, ಘಟನೆಗಳಿಗೆ ಸಂಬಂಧಿಸಿದಂತೆ ತನ್ನದೇ ಆದ ನಿಲುವನ್ನು ಹೊಂದಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಉದಾಹರಣೆಗೆ ಪ್ರಜಾವಾಣಿ ದೈನಿಕ ಹರಾರೆಯ ಅಲಿಪ್ತಸಮ್ಮೇಳನ ಮತ್ತು ರೇಕ್‌ಶಾವಿಕ್ ಶೃಂಗಕ್ಕೆ ಸಂಬಂಧಿಸಿದಂತೆ ಎರಡು ತಿಂಗಳ ಅವಧಿಯಲ್ಲಿ ಮುಖಪುಟದಲ್ಲಿ 32 ತಲೆ ಬರಹಗಳ ಸುದ್ದಿ 42 ಪ್ರಮುಖ ಸುದ್ದಿ, 10 ವಿಶೇಷ ಲೇಖನ 68 ಸಣ್ಣ ಸುದ್ದಿಗಳನ್ನು ಪ್ರಕಟಿಸಿದೆ. ಇದರಿಂದ ಭಾರತದ ಪತ್ರಿಕೊದ್ಯಮ ಅಮೇರಿಕಾದ ಸುದ್ದಿ ಧಾಳಿಯ ಮಧ್ಯೆಯೂ ತನ್ನದೇ ಆದ ನಿಲುವನ್ನು ಹೊಂದಿರುವುದು ಕಂಡು ಬರುತ್ತದೆ.

ಅಮೇರಿಕಾ ಹಾಗೂ ಇಂಗ್ಲೆಂಡ್ ಇಷ್ಟೆಲ್ಲಾ ಬಾರಿ ಭಾರಿಯಾಗಿ ಸುದ್ದಿಗಾಗಿ ಹಣ ವ್ಯಯ ಮಾಡುತ್ತಾ ಪ್ರಪಂಚದ ರಾಷ್ಟ್ರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಸಿದ್ಧವಾಗುತ್ತಿದ್ದಾಗ ಸಮಾಜವಾದಿ ರಾಷ್ಟ್ರಗಳು ಹಾಗೂ ಅಲಿಪ್ತ ರಾಷ್ಟ್ರಗಳು ಸುಮ್ಮನೆ ಕೂರಲಿಲ್ಲ.

ಸುಳ್ಳುಗಳನ್ನು— ಹೇಳುವುದರ ಮೂಲಕ ತಿರುಚಿದ ಸುದ್ದಿಗಳನ್ನು ಪ್ರಕಟಿಸಿ ಅದರ ಲಾಭ ಪಡೆದುಕೊಳ್ಳುವ ಅಮೇರಿಕಾದ ಯೋಜನೆಗೆ ಪ್ರತಿ ಉತ್ತರ ನೀಡಲು ಅಲಿಪ್ತ ಕೂಟ ಸಿದ್ಧವಾಗಿತ್ತು. ಅಮೇರಿಕಾದ ಏಕಮುಖ ಸುದ್ದಿಪ್ರವಾಹಕ್ಕೆ ತಡೆ ಹಾಕುವ ನಿಟ್ಟಿನಲ್ಲಿ 1973ರಲ್ಲಿ ಅಲ್ಜೀರ್ಸ್‌ನಲ್ಲಿ ನಡೆದ ಅಲಿಪ್ತ ಕೂಟದ ರಾಷ್ಟ್ರಗಳ ಗಣ್ಯರ ಸಮಾವೇಶ ಸಂವಹನ ಹಾಗೂ ಸುದ್ದಿಯ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ಕುರಿತು ಯೋಜನೆ ಹಾಕಿದವು 1976ರಲ್ಲಿ ಟೂನಿಸ್‌ನಲ್ಲಿ ನಡೆದ ಸಂಕಿರಣದಲ್ಲಿ "ನೂತನ ಸುದ್ದಿ ಮತ್ತು ಸಂವಹನ ವ್ಯವಸ್ಥೆ ಮೊದಲ ರೂಪುಪ್ರಾರಂಭವಾಯಿತು. ಈ ಯೋಜನೆಗೆ ಸರಿಯಾದ ರೂಪು ಸಿಕ್ಕಿದ್ದು 1976ರ ಕೋಲಂಬೋ ಸಮಾವೇಶದಲ್ಲಿ 1975ರಲ್ಲಿ ಸುಮಾರು 26 ಸುದ್ದಿ ಸಂಸ್ಥೆಗಳು ಈ ಜಾಲವನ್ನು ಹುಟ್ಟುಹಾಕಲು ಒಂದಾಯಿತು. ಕೊಲಂಬೋ ಸಮ್ಮೇಳನ ಇದಕ್ಕೆ ಹಸುರು ಬಾವುಟ ತೋರಿಸಿತು. ಯುನೆಸ್ಕೋದ ಸಹಾಯ ದೊಂದಿಗೆ ಕೆನಡಾ, ಕೋಲಂಬಿಯಾ, ಚಿಲಿ, ಈಜಿಪ್ಟ್, ಫ್ರಾನ್ಸ್, ಹಾಲಂಡ್, ಇಂಡಿಯಾ, ಇಂಡೋನೇಷಿಯಾ, ಜಪಾನ್, ನೈಜೀರಿಯಾ, ಟ್ಯುನಿಸಿಯಾ, ರಷ್ಯ, ಯುಎಸ್, ಯುಗೋಸ್ಲೋವಿಯಾ, ಜೈರೆ ಯೊಡನೆ ಒಟ್ಟುಗೂಡಿ ಹೊಸ ಸಂವಹನ ಜಾಲ ಹುಟ್ಟುಹಾಕಲು ಯೋಜಿಸಿತು. ಮ್ಯಾಕ್‌ಬ್ರೈಡ್ ಇದರ ನಿರ್ದೇಶನ ಹೊತ್ತಿದ್ದು. ಅಮೇರಿಕಾದ "ಮುಕ್ತ ಸುದ್ದಿ ಜಾಲ" ಕೇವಲ ಒಂದು ದಿಕ್ಕಿನದು ಮಾತ್ರ ಎಂದು ಯುನೆಸ್ಕೋ ಅಭಿಪ್ರಾಯ ಪಟ್ಟಿತು. ಮ್ಯಾಕ್‌ಬ್ರೈಡ್ ಅಮೇರಿಕಾದ ಈ ನೀತಿಯನ್ನು ಖಂಡಿಸಿದರು. ●

ಸತ್ಯ ಹೇಳಬೇಕೆಂದರೆ ಯಾವ ವಾರ್ತಾ ಸಂಸ್ಥೆಯೂ ಸತ್ಯ ಹೇಳುವುದಿಲ್ಲ.

—ಎಂ. ವಿ. ಕಾಮತ್

ಸಾಮ್ರಾಜ್ಯಶಾಹಿಗಳ ಕೈವಾಡ

(4ನೇ ಪುಟದಿಂದ)

ಇದೇ ಪ್ರಪಂಚಕ್ಕೆ ಸುದ್ಧಿಗಳನ್ನು ವಿತರಣೆ ಮಾಡುತ್ತಿರುವ ಸಂಸ್ಥೆಗಳಲ್ಲಿ ಅಮೇರಿಕಾದ ಅಸೋಸಿಯೆಟೆಡ್ ಪ್ರೆಸ್ [ಎ.ಪಿ.] ಯುನೈಟೆಡ್ ಪ್ರೆಸ್ ಇಂಟರ್ ನ್ಯಾಷನಲ್ [ಯು.ಪಿ.ಐ], ಇಂಗ್ಲೆಂಡಿನ ರಾಯಿಟರ್ಸ್, ಫ್ರಾನ್ಸ್‌ನ ಏಜೆನ್ಸ್ ಫ್ರಾನ್ಸ್ ಪ್ರೆಸ್[ಎ.ಎಫ್.ಪಿ.] ಈ ನಾಲ್ಕು ಮುಖ್ಯವಾದವು. ಇಂದು ಪ್ರಪಂಚದಾದ್ಯಂತ ಸುದ್ದಿ ವಿತರಿಸುತ್ತಿರುವ 10 ಮುಖ್ಯ ಸುದ್ದಿ ಸಂಸ್ಥೆಗಳ 34 ಮಿಲಿಯ ಪದಗಳಷ್ಟು ಸುದ್ಧಿಯಲ್ಲಿ ಈ ನಾಲ್ಕು ಸಂಸ್ಥೆಗಳೇ ಶೇಕಡಾ 97 ಭಾಗ ಸುದ್ಧಿಯನ್ನು ವಿತ್ತರಿಸುತ್ತದೆ. ಈ 34 ಮಿಲಿಯ ಪದಗಳಲ್ಲಿ ಅಮೇರಿಕಾದ ಸುದ್ದಿಸಂಸ್ಥೆಗಳು 28 ಮಿಲಿಯ ಪದಗಳನ್ನು ವಿತರಿಸುತ್ತದೆ.(ಶೇ 80ಭಾಗ)ಅಮೇರಿಕಾದ ಅಸೋಸಿಯೇಟೆಡ್ ಪ್ರೆಸ್ [ಎ.ಪಿ] ಒಂದೇ ವಿಶ್ವದಾದ್ಯಂತ 9,500 ಪತ್ರಿಕೆಗಳಿಗೆ ಸುದ್ದಿ ಬಿತ್ತರಿಸುತ್ತದೆ. ಯು.ಪಿ.ಐ. ಮತ್ತು ಎ.ಎಫ್.ಪಿ.ಗಳು ಸ್ಥಗಿತವಾಗುತ್ತಿರುವಹಿನ್ನೆಲೆಯಲ್ಲಿ ಎ.ಪಿ.ಇನ್ನಟಷ್ಟು ಬಲಾಢ್ಯವಾಗುತ್ತಿದೆ

ಏಕಮುಖ ಪ್ರವಾಹ

ಈ ಸಂಸ್ಥೆಗಳ ಸುದ್ದಿ ವಿತರಣೆಯೆಲ್ಲ ಏಕಮುಖವಾದದ್ದು. ಹಿಂದುಳಿದ ರಾಷ್ಟ್ರಗಳಿಗೆ ಸುದ್ಧಿಯನ್ನು ವಿಸ್ತರಿಸುವುದಕ್ಕೂ ಅಲ್ಲಿನ ಸುದ್ದಿಗಳನ್ನು ಸರಿಸಿಕೊಂಡು ಅದು ವಿಸ್ತರಿಸುವ ಸಂಖ್ಯೆಯನ್ನು ತಾಳೆ ಹಾಕಿ ನೋಡಿದರೆ ಗಾಬರಿಯಾಗುತ್ತದೆ. 1977ರಲ್ಲಿ ಶ್ರೀಲಂಕಾದಲ್ಲಿ ನಡೆದ ಸಮೂಹ ಮಾಧ್ಯಮದ ಪತ್ರಕರ್ತರ ಸಭೆಯ ಪ್ರಕಾರ ಅಮೇರಿಕಾದ ಎ.ಪಿ. ಪ್ರತಿ ದಿನ 90 ಸಾವಿರ ಪದಗಳಷ್ಟು ಸುದ್ದಿ ವಿತರಣೆ ಮಾಡಿದರೆ ಅದಕ್ಕೆ ಪ್ರತಿಯಾಗಿ 19 ಸಾವಿರ ಪದಗಳನ್ನು ಮಾತ್ರ ಪಡೆಯುತ್ತದೆ. ಯು.ಪಿ.ಐ. 1ಲಕ್ಷ ಪದ ಕಳಿಸಿ 40 ಸಾವಿರ ಪದಮಾತ್ರ ಪಡೆದುಕೊಳ್ಳುತ್ತಿದೆ.

ಇಷ್ಟು ಕಡಿಮೆ ಸುದ್ದಿಯನ್ನು ತರಿಸಿಕೊಂಡರೂ ತರಿಸಿಕೊಂಡ ಸುದ್ದಿಗಳಲ್ಲಿ ಕೇವಲ ಶೇಕಡಾ 25ರಷ್ಟನ್ನೂ ತಮ್ಮ ಮಾಧ್ಯಮಗಳಲ್ಲಿ ಬಳಸಿಕೊಳ್ಳುವುದಿಲ್ಲ. ಬಳಸಿಕೊಂಡ ಸುದ್ದಿಗಳೂ ಸಹ ಹಿಂದುಳಿದ ರಾಷ್ಟ್ರಗಳಲ್ಲಿನ ರಾಜಕೀಯ ಅಸ್ಥಿರತೆ, ಪ್ರಕ್ಷುಬ್ಧ ಪರಿಸ್ಥಿತಿ, ಕ್ಷಾಮ ಪ್ರವಾಹಗಳನ್ನು ಕುರಿತಾಗಿರುತ್ತದೆ. ಆದ್ದರಿಂದಲೇ ಹಿಂದುಳಿದ ದೇಶಗಳು ಎಂದರೆ ಹಸಿವು, ಕ್ಷಾಮಡಾಮರಗಳ ದೇಶ ಸ್ವಾಮಿಗಳು, ಹಾವುಗಳ ದೇಶ ಎಂದು ವಿದೇಶೀಯರು ಅಂದುಕೊಂಡಿರುವುದು.

ಗೋರ್ಬಚೇವ್ ಎಚ್ಚರಿಕೆ

ಅಮೇರಿಕಾ ಮತ್ತು ಅದರ ಮಿತ್ರ ರಾಷ್ಟ್ರಗಳು ಸುದ್ದಿಗಳನ್ನೇ ತಿರುಚಿ ಪ್ರಜಾಪ್ರಭುತ್ವದ ಅಂಗಗಳನ್ನೇ ಬುಡಮೇಲು ಮಾಡಹೊರಟಿರುವುದರ ಬಗ್ಗೆ ಸೋವಿಯತ್ ರಷ್ಯಾ ತನ್ನ ಎಚ್ಚರಿಕೆಯ ಕಣ್ಣುಗಳನ್ನು ಹಾಯಿಸಿದೆ. ಸಿಪಿಎಸ್‌ಯು ನ 27ನೇ ಕಾಂಗ್ರೆಸ್ ರಾಜಕೀಯ ವರದಿಯಲ್ಲಿ ಗೋರ್ಬಚೇವ್‌ರವರು "ಅಮೇರಿಕಾ ಇಂದು ಮುಂದು ಮಾಡುತ್ತಿರುವ ಜನರ ಐಕ್ಯತೆ, ಸಂಸ್ಕೃತಿ ಹಾಗೂ ಚರಿತ್ರೆಯನ್ನೇ ಕಲುಷಿತಗೊಳಿಸುವ, ಈ ಮನಸ್ಸುಗಳ ಮೇಲಿನ ದಾಳಿಯನ್ನು ಸರಿಯಾಗಿ ನಿಗ್ರಹಿಸಲು ಸನ್ನದ್ಧರಾಗಬೇಕು. ಅಮೇರಿಕಾದ ತಂತ್ರ ಮುಕ್ತ ವಿಚಾರಗಳ ವಿನಿಮಯಕ್ಕಾಗಲಿ ಅಥವಾ ನಾಸ್ತವಸ್ಥಿತಿಯ ವರದಿಗಾಗಲಿ ಅಗಿರದೆ ರಾಜಕೀಯ ಮತ್ತು ಮಾನಸಿಕ ಯುದ್ಧಕ್ಕೆ ಸಜ್ಜಾಗುತ್ತಿರುವುದರ ಗುರುತು. ಎಂದಿದ್ದಾರೆ. ○

— ರೈತರ ಹೋರಾಟಗಳು —

ಸೂರ್ಯಕಾಂತಿ ಬೀಜಗಳ ಅಭಾವ

ಈ ವರ್ಷ ಮುಂಗಾರು ಹಂಗಾಮಿಗೆ ಬೇಕಾದ ಸೂರ್ಯಕಾಂತಿ ಬೀಜದ ಬಗ್ಗೆ ರೈತರಿಂದ ಸಾಕಾಗುವಷ್ಟು ಬೇಡಿಕೆ ಇರುವುದು ತಮಗೆ ತಿಳದ ವಿಷಯವಾಗಿದೆ. ಆದರೆ ರೈತರಿಗೆ ಬೇಕಾದ ಉತ್ತಮ ಬೀಜ ಸಿಗದೇ ಇದ್ದ ರೈತರು ಕೇವಲ ಖಾಸಗಿ ವ್ಯಾಪಾರಸ್ಥರಮೇಲಿನ ಭರವಸೆಯಿಂದ ಬೀಜ ಖರೀದಿ ಮಾಡ ಬೇಕಾಗಿ ಬಂದಿದೆ. ಬಹಳಷ್ಟು ವ್ಯಾಪಾರಸ್ಥರು ಮೋಸದಿಂದ ಮಾರು ಕಟ್ಟೆಗೆ ಬಂದ ಬೀಜವನ್ನು ಉತ್ತಮ ಬೀಜವೆಂದು (ಮಾರ್ಡನ್ ತಳಿ) ಮಾರುವ ಮಟ್ಟಿಗೆ ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮ ಇದ್ದೂ ಇರದಂತಾಗಿದೆ. ಆದಕಾರಣ ಮೋಸಮಾಡುವಂತಹ ವ್ಯಾಪಾರಸ್ಥರಿಗೆ ತಕ್ಕ ಶಿಕ್ಷೆಯಾಗುವ ಕ್ರಮ ಕೈಗೊಳ್ಳಬೇಕು. ಹಾಗೂ ಬೀಜ ನಿಗಮಕ್ಕೆ ಮತ್ತು ಕೃಷಿ ಇಲಾಖೆಗೆ ಸರಿಯಾದ ಮಾರ್ಗದರ್ಶನ ನೀಡಬೇಕೆಂದು ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಘಟಕ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಒತ್ತಾಯಿಸಿದೆ.

ಈ ವಿಷಯದಲ್ಲಿ ಜಿಲ್ಲಾ ಪರಿಷತ್ ತೀವ್ರಗಮನಕೊಡದೇ ಹೋದಲ್ಲಿ ಅನುಭವಿಸಬೇಕಾದ ನಷ್ಟಕ್ಕೆ ಜಿಲ್ಲಾ ಪರಿಷತ್ ಹೊಣೆಯಾಗಬೇಕಾಗುತ್ತದೆಂದು ರಾಯಚೂರು ಘಟಕದ ಉಪಾಧ್ಯಕ್ಷ ಡಾ|| ಬಾಲಚಂದ್ರ ಎಚ್ಚರಿಸಿದ್ದಾರೆ.

ರೈತ ಸಂಘದ ಜಾಥಾ

ಕರ್ನಾಟಕ ಪ್ರಾಂತ ರೈತ ಸಂಘದ ಬಳ್ಳಾರಿ ತಾಲ್ಲೂಕು ಘಟಕವು ಜೂನ್ 17-18ರಂದು ಎರಡು ದಿನಗಳ ಸೈಕಲ್ ಜಾಥಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದೆ. ಜಾಥಾದ ಸದಸ್ಯರನ್ನು ರೈತರು ಆತ್ಮೀಯವಾಗಿ ಸ್ವಾಗತಿಸಿದರು. ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲೂ ನೂರಾರು ರೈತರು ಉತ್ಸಾಹದಿಂದ ಸಭೆಗಳಲ್ಲಿ ಭಾಗವಹಿದ್ದರು. ಆಳುವ ಸರ್ಕಾರಗಳು ತಮ್ಮ ಬಂಡವಾಳಶಾಹೀ ಪರ ಧೋರಣೆಯಿಂದಾಗಿ ರೈತ ವಿರೋಧಿ ಕ್ರಮಗಳನ್ನು ಅನುಸರಿಸುತ್ತಿರುವುದನ್ನು ಮತ್ತು ರೈತರ ಸಮಸ್ಯೆಗಳ ಪರಿಹಾರಕ್ಕೆ ಸಂಘಟನೆ ಮತ್ತು ಹೋರಾಟ ಒಂದೇ ಮಾರ್ಗವೆಂಬುದನ್ನು ಸಭೆಗಳಲ್ಲಿ ವಿವರಿಸಲಾಯಿತು. ಸೈಕಲ್ ಜಾಥಾದ ನೇತೃತ್ವವನ್ನು ರೈತ ಸಂಘದ ಬಳ್ಳಾರಿ ತಾಲ್ಲೂಕು ಸಂಚಾಲಕರಾದ ಶ್ರೀ ಯು. ಬಸವರಾಜ್ ವಹಿಸಿದ್ದರು. ಜಾಥಾದ ಸಮಯದಲ್ಲಿ ಹಳ್ಳಿಗಳನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಲಾಯಿತು. ಪ್ರತಿಯೊಂದು ಸಭೆಯ ನಂತರವೂ ಜಾಥಾದ ಕಾರ್ಯಕರ್ತರು 'ಮಾಯಾ ಬಜಾರ್' ಎಂಬ ನಾಟಕವನ್ನು ಅಭಿನಯಿಸಿದರು. ರೈತ ಸಂಘವು ಮುಂದಿನ ದಿನಗಳಲ್ಲಿ ರೈತರನ್ನು ಜಾಗೃತಗೊಳಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆಗಳನ್ನು ರೂಪಿಸುತ್ತಿದೆ.

ರೈತರಿಂದ ರಸ್ತೆತಡೆ ಚಳವಳಿ

ತಮ್ಮ ತುರ್ತು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಬಳ್ಳಾರಿ ತಾಲ್ಲೂಕಿನ ಅಮರಾಪುರ, ಟಿ.ಬೂದಿಹಾಳ, ಗೋಡ್ಯಾಳು ಗ್ರಾಮಗಳ ರೈತರು ರೈತ ಸಂಘದ ನೇತೃತ್ವದಲ್ಲಿ ಮೂರು ಗಂಟೆಗಳ ಕಾಲ ರಸ್ತೆ ಸಂಚಾರಕ್ಕೆ ತಡೆಯುಂಟು ಮಾಡಿದರು. ಈ ಮಧ್ಯೆ ನಡೆದ ಸಭೆಯಲ್ಲಿ 8ದಿನಗಳ ಅವಧಿ ನೀಡಿದ್ದರೂ ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಎಂಜಿನಿಯರುಗಳು, ಜಿಲ್ಲಾ ಪರಿಷತ್ ಅಧ್ಯಕ್ಷರುಗಳು ಈ ಬಗ್ಗೆ ಗಮನ ಹರಿಸದೇ ಇರುವುದನ್ನು ತೀವ್ರವಾಗಿ ಖಂಡಿಸಲಾಯಿತು. ಈ ಎಲ್ಲಾ ಅಧಿಕಾರಿಗಳು ಜೂನ್ 24ರಂದು ಮೆರವಣಿಗೆಯಲ್ಲಿ ಹೊರಟ ಮೇಲ್ಕಂಡ ಮೂರು ಹಳ್ಳಿಗಳ ರೈತರ ಎದುರಿಗೆ ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿಕೊಂಡಿದ್ದರೆಂಬುದು ಗಮನಾರ್ಹ. ರಸ್ತೆ ತಡೆ ಕಾರ್ಯಕ್ರಮ ಪ್ರಾರಂಭವಾಗಿ 3ತಾಸುಗಳ ನಂತರ ಬಂದ ಅಧಿಕಾರಿಗಳು ನಾಳೆಯಿಂದಲೇ ನೀರಾವರಿ ಕಾಲುವೆಯನ್ನು ಪೂರ್ಣಗೊಳಿಸುವುದಾಗಿ ಭರವಸೆ ನೀಡಿದ ನಂತರ ಚಳುವಳಿಯನ್ನು ಹಿಂತೆಗೆದುಕೊಳ್ಳಲಾಯಿತು.

○

ಆಳಂದ ಬಂದ್, ರಸ್ತಾರೋಖೋ

ಜನಜಾಗೃತಿ ಸಮಿತಿಯು ಕರೆಯ ಮೇರೆಗೆ ಇಂದು ಎಲ್ಲಾ ಪಕ್ಷಗಳ ಮುಖಂಡರು ಮತ್ತು ಆಳಂದ ನಾಗರೀಕರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತಾಪಿ ಜನರು ಆಳಂದ-ಗುಲ್ಬರ್ಗಾ ರಾಜ್ಯ ಹೆದ್ದಾರಿಯಲ್ಲಿರುವ ಜೋಗಿ ಬಸ್ ನಾಲಾ ಸೇತುವೆ ದುರಸ್ತಿ ಒತ್ತಾಯಿಸಿ ಆಳಂದ ಬಂದ್ ಹಾಗೂ ರಸ್ತಾ ರೋಖೋ ಆಚರಿಸಿದರು.

ಬೆಳಗ್ಗೆ 10ಗಂಟೆಗೆ ತಹಶೀಲ್ದಾರ್‌ಕಛೇರಿಯಿಂದ ಪಟ್ಟಣದ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹೊರಟು ಜೋಗಿ ಸೇತುವೆ ನಿರ್ಮಿಸಬೇಕೆಂದು ಘೋಷಣೆ ಕೂಗುತ್ತಾ ಬಸ್‌ಸ್ಟ್ಯಾಂಡ್‌ವರೆಗೆ ಬಂದು ರಸ್ತಾ ರೋಖೋದಲ್ಲಿ ಪಾಲ್ಗೊಂಡರು. ಕಳೆದ ಮೂರು ವರ್ಷಗಳ ಹಿಂದೆ ಸೇತುವೆ ದುರಸ್ತಿ ಮಾಡದೇ ವಿಳಂಬ ಮಾಡಿದ್ದು ಅಲ್ಲದೇ ಸೇತುವೆ ನಿರ್ಮಿಸಲು ಕ್ರಮ ಕೈಗೊಳ್ಳುವ ಮುಂಚೆ ಹಾಗೂ ಮೂರು ವರ್ಷಗಳಿಂದ ಸೇತುವೆ ವಾಹನಗಳ ಹೋಡಾಟ ನಿರ್ಬಂಧಿಸಿದರೂ ಪಕ್ಕದಲ್ಲಿ ತಾತ್ಪೂರ್ತಿಕ ಸೇತುವೆ ನಿರ್ಮಿಸದೇ ಇರುವ ಈ ಕ್ರಮಕ್ಕೆ ಮುಖ್ಯ ಕಾರಣ ಮುಖ್ಯವಾಗಿತ್ತು.

ಬಂದ್ ಸಂಪೂರ್ಣ ಯಶಸ್ವಿಯಾಯಿತಲ್ಲದೇ ನಾಗರೀಕರು ವಿದ್ಯಾರ್ಥಿಗಳು ವ್ಯಾಪಾರಸ್ಥರು,ರೈತರು, ಯುವಕರು ತಮ್ಮ ದಿನ ನಿತ್ಯದ ಚಟುವಟಿಕೆ ನಿಲ್ಲಿಸಿಮೆರವಣಿಗೆಯಲ್ಲಿ ಪಾಲ್ಗೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮಾನ್‌ಪಡೆ ಜನತಾ ಪಕ್ಷದ ಶಶಿಕಾಂತ ಕೊರಳ್ಳಿ ಮತ್ತು ಹಿರಿಯರಾದ ಜೀವಂತರಾವ ಡೋಲೆ, ಯುವಜನತಾದ ರೈಕ ಅವಸಾರಿಹಾಗೂ ರಾಜಶೇಖರ್ ಪಾಟೀಲ್ ಮತ್ತು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಬಸವರಾಜ ಮರಡಿಯವರು ಈ ಕಾರ್ಯಕ್ರಮದ ನೇತೃತ್ವವಹಿಸಿದ್ದರು.

ಅಧಿಕಾರಿಗಳು ಈ ನಾಲ್ಕು ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ಕೊಟ್ಟನಂತರ ಬಂದ್ ಹಾಗೂ ರಸ್ತೆ ರೋಖೋಹಿಂತೆಗೆದುಕೊಳ್ಳಲಾಯಿತು.

ಅಂಬಲಗಾ ಮಂಡಳ ಸಭೆ

ಗುಲ್ಬರ್ಗಾ ಜಿಲ್ಲೆಯ ಅಂಬಲಗಾದಲ್ಲಿ ಜೂನ್ 30ರಂದು ಸಿ.ಪಿ.ಐ.(ಎಂ) ನೇತೃತ್ವದ3 ಮಂಡಲ ಪಂಚಾಯತ್ ಸಭೆ ಸೇರಿತ್ತು, ಸಭೆಯಲ್ಲಿ 8 ಹಳ್ಳಿಗಳ ಅಭಿವೃದ್ಧಿ ಕೆಲಸಗಳಾದ ಶುದ್ಧವಾದ ನೀರಿನ ಪೂರೈಕೆ, ರಸ್ತೆ ಕೆಲಸಗಳು, ಪಡಿತರ ಪದ್ಧತಿಯ ಆಹಾರ ಧಾನ್ಯಗಳು ವ್ಯವಸ್ಥಿತ ರೀತಿಯಲ್ಲಿ ಸರಬರಾಜು ಮಾಡುವ ಬಗ್ಗೆ ಮತ್ತು ಜುಲೈ ತಿಂಗಳಲ್ಲಿ 8 ಹಳ್ಳಿಗಳಲ್ಲಿ ಗ್ರಾಮ ಸಭೆ ನಡೆಸುವದಾಗಿ ಅಧ್ಯಕ್ಷರು ತಿಳಿಸಿದರು.

ಹಾಸನದಲ್ಲಿ ಆಫ್ರಿಕಾ ದಿನಾಚರಣೆ

ಡಿ.ವೈ.ಎಫ್.ಐ. ಹಾಸನ ಶಾಖೆಯ ಆಶ್ರಯದಲ್ಲಿ ಆಫ್ರಿಕಾ ದಿನವನ್ನು ಆಚರಿಸಲಾಯಿತು. ಈ ಸಂಬಂಧವಾಗಿ ಜೂನ್ 28ರ ಭಾನುವಾರ ಸರ್ಕಾರದ ಎ.ವಿ.ಕೆ. ಕಾಲೇಜಿನಲ್ಲಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಮಾತನಾಡಿದ ನಬಾರ್ಡನ ಸಹಾಯಕ ಅಭಿವೃದ್ಧಿ ಅಧಿಕಾರಿ ಸಿ.ರಾಜಶೇಖರ್‌ರವರು ದಕ್ಷಿಣ ಆಫ್ರಿಕಾದಲ್ಲಿ ಕಮ್ಯೂನಿಸ್ಟರು ಸ್ವಾತಂತ್ರ್ಯ ಹೋರಾಟದ ಮುಂಚುಣಿಯಲ್ಲಿರುವುದು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಚಿಂತೆಗೀಡು ಮಾಡಿವೆ. ಕಮ್ಯೂನಿಸ್ಟರ ಕೈಗೆ ಆಡಳಿತ ಸೂತ್ರ ಹೋಗಬಹುದೆಂಬ ಹೆದರಿಕೆಯಿಂದ ದಕ್ಷಿಣ ಆಫ್ರಿಕಾ ಹೋರಾಟವನ್ನು ಕ್ರೂರವಾಗಿ ದಮನ ಮಾಡಲಾಗುತ್ತಿದೆ. ಬಂಡವಾಳಶಾಹಿ ದೇಶಗಳು ಎಂ.ಎನ್.ಸಿ. ಗಳನ್ನು ಆಫ್ರಿಕಾದಲ್ಲಿ ಸ್ಥಾಪಿಸಿ ಆಫ್ರಿಕಾದ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುತ್ತಿವೆ" ಎಂದರು. ಮತ್ತೊಬ್ಬ ಮುಖ್ಯ ಅತಿಥಿ ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕ ಜಯರಾಮ ಹೆಗಡೆ ಮಾತನಾಡುತ್ತಾ ದಕ್ಷಿಣ ಆಫ್ರಿಕಾದ ಕರಿಯರ ಸ್ಥಿತಿಗೂ, ಭಾರತದ ಹಳ್ಳಿಗರ ಪರಿಸ್ಥಿತಿಗೂ ಮೂಲ ಭೂತವಾಗಿ ಯಾವುದೇ ವ್ಯತ್ಯಾಸವಿಲ್ಲವೆಂದು ಉದಾಹರಣೆ ಸಹಿತ ವಿವರಿಸಿದರು. ದಕ್ಷಿಣ ಆಫ್ರಿಕಾ ಸಮಸ್ಯೆಯನ್ನು ಅಭ್ಯಾಸ ಮಾಡುವುದರಿಂದ ನಾವು ನಮ್ಮ ಸಮಸ್ಯೆಯನ್ನೇ ತಿಳಿದುಕೊಂಡಂತ್ತಾಗುತ್ತದೆ. ರಾಜಕೀಯ ಗುಲಾಮಗಿರಿ ವಿರುದ್ಧ ಹೋರಾಟ ಅಗತ್ಯವೆಂದು ಹೆಗಡೆ ತಿಳಿಸಿ, ದಕ್ಷಿಣ ಆಫ್ರಿಕಾ ಸ್ವಾತಂತ್ರ್ಯ ಹೊರಾಟಗಾರ ನೆಲ್ಸನ್ ಮಾಂಡೆಲಾ ಬಿಡುಗಡೆಗೆ ಎಲ್ಲಾ ಸ್ವಾತಂತ್ರ್ಯ ಪ್ರಿಯರು ದನಿ ಎತ್ತಬೇಕೆಂದು ಕರೆಯಿತ್ತರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ಜ.ಹೋ. ನಾರಾಯಣಸ್ವಾಮಿ ವಹಿಸಿದ್ದರು. ಪ್ರಾರಂಭದಲ್ಲಿ ಕಾ. ಕೆ.ಟಿ. ರಾಘವೇಂದ್ರ ಸ್ವಾಗತಿಸಿದರು. ಡಿ.ವೈ.ಎಫ್.ಐ.ಕಾರ್ಯದರ್ಶಿ ಕಾಂ||ಮೋಹನ್ ದಾಸ್, ಡಿ.ವೈ.ಎಫ್.ಐ.ನ ಗುರಿ ಉದ್ದೇಶಗಳನ್ನು ವಿವರಿಸಿದರು. ಕೊನೆಯಲ್ಲಿ ಕಾಂ. ಆರ್. ಸಣ್ಣಪ್ಪ ವಂದಿಸಿದರು.

●

ಅಂತರ್ಜಾತೀಯ ವಿವಾಹ

ಬೆಂಗಳೂರಿನ ಸಿ.ಪಿ.ಐ.(ಎಂ)ಕಾರ್ಯಕರ್ತರಾಗಿರುವ ಕಾ|| ಕೋದಂಡ ರಾಮನ್‌ರವರ ಮಗಳು ಪ್ರೇಮ ಮತ್ತು ಮುನಿರಾಜು ರವರ ಮದುವೆ ಜೂನ್ 20ರಂದು ನಡೆಯಿತು. ಈ ಸಂಬಂಧವಾಗಿ ಜುಲೈ 4ರಂದು ನಗರದ ಎನ್.ಜಿ.ಓ. ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾ|| ಎಸ್. ಸೂರ್ಯನಾರಾಯಣ ರಾವ್ ಅವರು ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿ ತಮ್ಮ ಮಗಳನ್ನು ಅಂತರ್ಜಾತೀಯ ವಿವಾಹ ಮಾಡಿಕೊಟ್ಟಿದ್ದಕ್ಕಾಗಿ ಕಾ|| ಕೋದಂಡರಾಮನ್ ಅವರನ್ನು ಶ್ಲಾಘಿಸಿದರು. ನವ ದಂಪತಿಗಳಿಗೆ ಶುಭಕೋರಿ ಮಾತನಾಡಿದರು. ಕಾ|| ವಾರಿಯರ್ ಸ್ವಾಗತಿಸಿದರು.

●

"ಬೆಫಿಗೆ ಮಾನ್ಯತೆ ನೀಡಿ"

ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನಿನ ನೇತೃತ್ವದಲ್ಲಿ, ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನಿನ ಸದಸ್ಯರು, ವಿಜಯ ಬ್ಯಾಂಕ್‌ನ ಎಲ್ಲ ಶಾಖೆಗಳಲ್ಲ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿ, 5ನೆಯ ದ್ವಿಪಕ್ಷೀಯ ಒಪ್ಪಂದದಲ್ಲಿ ಬಿ.ಇ.ಎಫ್.ಐ ಯನ್ನು ಸಮಾಲೋಚನೆಗೆ ಕರೆಯಬೇಕೆಂದು ಕೇಂದ್ರ ಸರ್ಕಾರ ಮತ್ತು ಬ್ಯಾಂಕ್ ಆಡಳಿತ ವರ್ಗಗಳನ್ನು ಒತ್ತಾಯಿಸಲಾಗಿದೆ.

ತುಟ್ಟಿ ಭತ್ಯೆಯನ್ನು 600ಪಾಯಿಂಟುಗಳಲ್ಲಿ ಮೂಲ ಸಂಬಳದೊಂದಿಗೆ ಜೋಡಿಸುವುದು, 1970ರಿಂದೀಚೆಗೆ ಬ್ಯಾಂಕು ನೌಕರರಿಗೆ ದ್ವಿಪಕ್ಷೀಯ ಒಪ್ಪಂದಗಳಲ್ಲಿ ಆದ ಅನ್ಯಾಯವನ್ನು ಹೋಗಲಾಡಿಸುವುದು, ನಿವೃತ್ತಿವೇತನ, ಮಕ್ಕಳ ವಿದ್ಯಾಭ್ಯಾಸ ವೆಚ್ಚಗಳನ್ನು ಪೂರೈಸುವುದಕೋಸ್ಕರ ಫ್ಯಾಮಿಲಿ ಭತ್ಯೆ ಇತ್ಯಾದಿ ಬೇಡಿಕೆಗಳಲ್ಲಿ ಸೇರಿವೆ. ಬ್ಯಾಂಕುಗಳಲ್ಲಿ ಹೊಸ ನೇಮಕಾತಿಗಳ ಮೇಲಿನ ನಿರ್ಬಂಧ ಸಡಿಲಿಸಬೇಕು. ಹಂಗಾಮಿ ನೌಕರರನ್ನು ಖಾಯಂಗೊಳಿಸಬೇಕು ಎಂದೂ ಕೇಳಲಾಗಿದೆ. ಅಲ್ಲದೆ, ನೌಕರರೇ ಮಾಡಬಹುದಾದ ಕೆಲಸಗಳನ್ನು ಖಾಸಗಿಯವರಿಗೆ ಕಾಂಟ್ರಾಕ್ಟ್ ಕೊಡುವ ಪದ್ಧತಿಯನ್ನು ಬಿ.ಇ.ಎಫ್.ಐ. ವಿರೋಧಿಸುತ್ತದೆ. ಎಂಬುದಾಗಿ ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಅಧ್ಯಕ್ಷ ಕಾ|| ಅರುಣ ಕುಮಾರ್ ತಿಳಿಸಿದ್ದಾರೆ.

"ನಮ್ಮ 'ಮೊಹ್ರ್'(ಮಾರ್ಕ್ಸ್)ಗೆ ಬೇರೆ ಎಲ್ಲಾ ಔಷಧಿಗಿಂತಲೂ ಎಂಗೆಲ್ಸ್ ಹೆಚ್ಚು ಹಿತಕಾರಿಯಾಗಿದ್ದಾರೆ...."

— ಮಾರ್ಕ್ಸ್ ಕುವರಿ ಜೆನ್ನಿ

ಸು. ರಂ. ಎಕ್ಕುಂಡಿ ಸಂದರ್ಶನ

(2ನೇ ಪುಟದಿಂದ)

ಗೋರ್ಬಚೇವ್‌ರವರ ಶಾಂತಿ ಸೂತ್ರಗಳನ್ನು ವಿದ್ಯಾರ್ಥಿ ಯುವಕರ ಮಧ್ಯೆ ಕೊಂಡೊಯ್ಯುವ ಆಸೆಯಿದೆ. ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ.

'ಶಾಂತಿಗಾಗಿ ವಿಜ್ಞಾನಿಗಳು' 'ಶಾಂತಿಗಾಗಿ ವಕೀಲರು' ಇದ್ದಾರೆ. ಅದೇ ರೀತಿ 'ಶಾಂತಿಗಾಗಿ ಬರಹಗಾರರು' ಗುಂಪನ್ನು ಪ್ರಾರಂಭಿಸಬೇಕೆಂದಿದ್ದೇನೆ. ರೇಗನ್‌ರವರ ಬಣ್ಣದ ಮುಖವಾಡಗಳು ಬಯಲಾಗಲು ಸಕ್ರೀಯವಾಗಿ ನನ್ನನ್ನು ತೊಡಗಿಸಿಕೊಳ್ಳುತ್ತೇನೆ.

ರೇಗನ್ ಒಬ್ಬ ಮಹಾಸುಳ್ಳುಗಾರ ಉದಾಹರಣೆಗೆ ಈ ಇರಾನ್‌ಗೇಟ್ ಪ್ರಕರಣವನ್ನು ನೋಡಿ. ನಿಕರಾಗುವಾದ ಸ್ವಾತಂತ್ರ್ಯ ಹೋರಾಟ ರೇಗನ್‌ನನ್ನು ದಳ್ಳುರಿಯಲ್ಲಿ ದೂಡಿದೆ. ಅದಕ್ಕಾಗಿ ಅವರ ವಿರೋಧಿಗಳಿಗೆ ಹಣ ಸರಬರಾಜು ಮಾಡುತ್ತಿದ್ದಾನೆ. ಆದರೆ ಅದೇ ಸಮಯದಲ್ಲಿ ಸುಳ್ಳುಗಳನ್ನು ಹೇಳುತ್ತಿದ್ದಾನೆ. ಈ ಇರಾನ್‌ಗೇಟ್ ಸಂಬಂಧದಲ್ಲಿ ಎಲ್ಲಾ ಗುಟ್ಟಾಗಿಟ್ಟ ತನ್ನ ದೇಶದ ಜನತೆಗೇ ಸುಳ್ಳು ಹೇಳಿದವನು ಇನ್ನು ನಮಗೆ ಸುಳ್ಳು ಹೇಳುವುದಿಲ್ಲ ಎಂದು ನಂಬುವುದು ಹೇಗೆ? ಇಂದು ರೇಗನ್ ತನ್ನ ವಿರೋಧಿ ರಾಷ್ಟ್ರ ಗಳಿಗೆಲ್ಲಾ ಬೆಂಕಿಹಚ್ಚಿ ಅದರಲ್ಲಿ ತನ್ನ ಮೈ ಕಾಯಿಸಿಕೊಳ್ಳುವ ಕೆಲಸದಲ್ಲಿ ತೊಡಗಿದ್ದಾನೆ.

ನಿಮ್ಮ ಮುಂದಿನ ಪ್ರಕಟಣೆಗಳು ಯಾವುವು?

'ಶಾಂತಿಯ ಕಾರಂಜಿಗಳು, ಎಂಬ 21 ಲೇಖನಗಳನ್ನು ಬರೆದಿದ್ದೇನೆ. ಅದನ್ನು ಪ್ರಕಟಿಸಬೇಕು. ಜೊತೆಯಲ್ಲೇ ಬ್ರೆಜ್ನೇವ್‌ರವರ ಆತ್ಮಚರಿತ್ರೆ 'ಸೈರನ್', ಕನ್ನಡಕ್ಕೆ ಅನುವಾದ ಮಾಡುತ್ತಿದ್ದೇನೆ. ಫ್ಯಾಕ್ಟರಿಯ ಆ 'ಸುಳ್ಳು', ಇಡೀ ದುಡಿಯುವ ವರ್ಗದ ಸಂಕೇತವಾಗಿದೆ. ವಿಶ್ವ ಕಾರ್ಮಿಕರಿಗೆಲ್ಲಾ ಪರಿಚಯವಿರುವ ದುಡಿಮೆಯ ಅದೇ ಸಮಯದಲ್ಲಿ ಮಾಲೀಕರ ಶೋಷಣೆಯನ್ನು ಪ್ರತಿನಿಧಿಸುವ ಈ 'ಸುಳ್ಳು' ಅತ್ಯಂತ ರೋಚಕವಾದ ಆತ್ಮಚರಿತ್ರೆ.

○

ಗೂರ್ಖಾಲ್ಯಾಂಡ್ ಹಿಂಸಾಚಾರ

ಜಿ.ಎನ್.ಎಲ್.ಎಫ್. ಜೂನ್ ಕೊನೆ ವಾರದಲ್ಲಿ 13 ದಿನಗಳ ಬಂದ್‌ಗೆ ಕರೆಕೊಟ್ಟಿತು. ಈ ಬಂದ್ ಕರೆ ಡಾರ್ಜಿಲಿಂಗ್ ಜಿಲ್ಲೆಯನ್ನು ಹಿಂಸಾಚಾರದ ಓಕುಳಿಯಲ್ಲಿ ಮುಳುಗಿಸಿತು. ಜಿ.ಎನ್.ಎಲ್.ಎಫ್. ಕಾರ್ಯಕರ್ತರ ಉನ್ಮಾದ ಮತ್ತು ಫೈಸಿಂಗ್ ಜತೆ ಮಾತು ಕತೆಗೆ ದಿನ ಗೊತ್ತು ಮಾಡುವಲ್ಲಿ ಕೇಂದ್ರ ಸರ್ಕಾರದ ಉದಾಸೀನವಿಲ್ಲದಿದ್ದರೆ ಈ ಬಂದ್ ಮತ್ತು ಅದರ ಹಿಂಸಾತ್ಮಕ ಪರಿಣಾಮಗಳನ್ನು ತಡೆಗಟ್ಟುವುದು ಸಾಧ್ಯವಾಗಿತ್ತು.

ಬಂದ್ ಜೂನ್ 29ಕ್ಕೆ ಹಿಂದೆಗೆದುಕೊಳ್ಳುವವರೆಗೆ ಡಾರ್ಜಿಲಿಂಗ್‌ನಲ್ಲಿ ಜನಜೀವನವನ್ನು ಪೂರ್ಣವಾಗಿ ಚೆಲ್ಲಾಪಿಲ್ಲಿ ಮಾಡಿತು. ಹಲವಾರು ಸಾವು ನೋವುಗಳಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೇರಿದ ಆಸ್ತಿಪಾಸ್ತಿಗಳಿಗೆ 5ಕೋಟಿ ರೂ. ನಷ್ಟ ಉಂಟುಮಾಡಿವೆ. ಮೊದಲ ದಿನದಿಂದಲೇ ಜಿ.ಎನ್.ಎಲ್.ಎಫ್. ಕಾರ್ಯಕರ್ತರು ಸರ್ಕಾರಿ ಕಛೇರಿಗಳು, ರಸ್ತೆ, ಸೇತುವೆ, ಬ್ಯಾಂಕ್, ಪೋಲೀಸ್ ಸ್ಟೇಶನ್‌ಗಳ ಮೇಲೆ ಸುವ್ಯವಸ್ಥಿತವಾಗಿ ಭಾರಿ ಪ್ರಮಾಣದಲ್ಲಿ ದಾಳಿ ನಡಸಿತು. ಜಿ.ಎನ್.ಎಲ್.ಎಫ್ ಗ್ಯಾಂಗ್‌ಗಳು ಹೆಚ್ಚಾಗಿ ರಾತ್ರಿಯಲ್ಲಿ ಭಾರಿ ಪ್ರಮಾಣದ ಆಧುನಿಕ ಶಸ್ತ್ರಾಸ್ತ್ರಗಳೊಂದಿಗೆ ಈ ಸ್ಥಳಗಳಿಗೆ ನುಗ್ಗಿ ಹಿಂಸಾಚಾರದಲ್ಲಿ ತೊಡಗಿದವು. ಮೊದಲ ಎರಡು ದಿನಗಳಲ್ಲೇ 20 ಸರ್ಕಾರಿ ಕಟ್ಟಡಗಳಿಗೆ ಬೆಂಕಿ ಇಡಲಾಯಿತು. ಆಮೇಲೆ 2 ವಿದ್ಯುತ್ ಶಕ್ತಿ ಕೇಂದ್ರಗಳನ್ನು ಹಾಳುಗೆಡವಲಾಯಿತು. ಸ್ಕೂಲುಗಳು, ಆಸ್ಪತ್ರೆಗಳೂ ಈ ಜಿ.ಎನ್.ಎಲ್.ಎಫ್. ಕೊಲೆಗಡುಕರಿಗೆ ಪವಿತ್ರವೆನ್ನಿಸಲಿಲ್ಲ. ಹಿಂದೆಂದೂ ಕಾಣದ ರೀತಿಯಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿತು.

ಈ ಹಿಂಸಾಚಾರಕ್ಕೆ ಜನರ ಪ್ರತಿರೋಧ ವ್ಯಕ್ತವಾಗುವುದೂ ತಡವಾಗಲಿಲ್ಲ. ಇದಕ್ಕೆ ಸಿ.ಪಿ.ಐ.(ಎಂ) ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ನಾಯಕತ್ವ ಕೊಟ್ಟವು ಎಂದು ಬೇರೆ ಹೇಳಬೇಕಾಗಿಲ್ಲ. ಗರ್‌ಬಥಾನ್ ಪ್ರದೇಶದಲ್ಲಿ ಜಿ.ಎನ್.ಎಲ್.ಎಫ್. ಗ್ಯಾಂಗುಗಳಿಗೆ ಸಿ.ಐ.ಟಿ.ಯು. ಕಾರ್ಯಕರ್ತರು ತೀವ್ರ ಪ್ರತಿರೋಧ ನೀಡಿದರು. ಇದರಿಂದ ಉಂಟಾದ ಹಣಾಹಣಿಯಲ್ಲಿ ತೋತ್ಮಾ ಮುಂಡಾ ಎಂಬ ಸಿ.ಐ.ಟಿ.ಯು. ಕಾರ್ಯಕರ್ತ [ಈತ ಮುಂಬಯಿಯ ಸಿ.ಐ.ಟಿ.ಯು. ಸಮ್ಮೇಳನಕ್ಕೆ ಪ್ರತಿನಿಧಿಯಾಗಿದ್ದರು.) ಹುತಾತ್ಮರಾದರು. ಹಲವಾರು ಸಾವುನೋವುಗಳಾದವು. ದೂಲರ್ಸ್, ಬಿಜೊನ್‌ಬಾರಿ, ಸಿಪೋಯೆಧುರಾ, ಮುಂತಾದ ಹೆಚ್ಚಿನ ಟೀ ತೋಟ ಪ್ರದೇಶಗಳಲ್ಲಿ ಜಿ.ಎನ್.ಎಲ್.ಎಫ್.ನುಸುಳಿ ಹಿಂಸಾಚಾರ, ನಡೆಸದಂತೆ ಪ್ರತಿರೋಧ ನೀಡಲಾಯಿತು

ಆದರೂ ದಿನದಿಂದ ದಿನಕ್ಕೆ ಹಿಂಸಾಚಾರ ಹೆಚ್ಚಿತು. ಜಿ.ಎನ್.ಎಲ್.ಎಫ್. ನಾಯಕತ್ವ, ಕಾರ್ಯಕರ್ತರ ಮಧ್ಯೆ ಬಿರುಕುಹೆಚ್ಚಾಗುತ್ತಾ ಹೋದ ಹಾಗೆ ಪೂರ್ಣ ಅರಾಜಕತೆ ತಾಂಡವವಾಡತೊಡಗಿತು. ಈ ಭೀಕರ ಪರಿಸ್ಥಿತಿಯಲ್ಲಿ ಜನರ ಪ್ರಾಣ ಆಸ್ತಿ ಪಾಸ್ತಿ ಕಾಪಾಡಲು ಪಶ್ಚಿಮ ಬಂಗಾಳ ಎಡರಂಗ ಸರ್ಕಾರ ಉಗ್ರಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಯಿತು. ಸರ್ಕಾರ ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಿ ಕಾರ್ಯಾಚರಣೆ ಪ್ರತಿಬಂಧಕ ಸುಗ್ರೀವಾಜ್ಞೆ ಹೊರಡಿಸಿ ಹಿಂಸಾಚಾರದಲ್ಲಿ ತೊಡಗಿದ ಜಿ.ಎನ್.ಎಲ್.ಎಫ್. ಗೂಂಡಾಗಳನ್ನು ಬಂಧಿಸಲಾಯಿತು. ಕಾ॥ಜ್ಯೋತಿಬಸುಮತ್ತು ಕಾ.ಸರೋಜ್ ಮುಖರ್ಜಿ ಈ ಕ್ರಮದ ಅನಿವಾರ್ಯತೆಯನ್ನು ಒತ್ತಿ ಹೇಳಿದ್ದಾರೆ. ಸಿ.ಪಿ.ಐ. (ಎಂ) ಮತ್ತು ಎಡರಂಗ ಪ್ರತಿಬಂಧಕ ಕಾನೂನುಗಳಿಗೆ ವಿರುದ್ಧವಾದರೂ, ಪ್ರಜಾಸತ್ತೆಗೆ ವಿರುದ್ಧವಾದ ಹಿಂಸಾಚಾರದ ಚಳುವಳಿ ಹತ್ತಿಕ್ಕಲು ಬೇರೆ ದಾರಿ ಇಲ್ಲದೆ, ಇದನ್ನು ಮನಸ್ಸಿಲ್ಲದ ಮನಸ್ಸಿನಿಂದ ಉಪಯೋಗಿಸಬೇಕಾಯಿತೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಇಷ್ಟು ಹೊತ್ತಿಗೆ ಹಿಂಸಾಚಾರದ ಭೀಕರತೆ ಮತ್ತು ರಾಜ್ಯ ಸರ್ಕಾರದ ಸತತ ಪ್ರಯತ್ನಗಳಿಂದ ಎಚ್ಚತ್ತ ಕೇಂದ್ರ ಸರ್ಕಾರ ಜೂನ್ 27ರಂದು ಬೂಟಾಸಿಂಗ್‌ರವರನ್ನು ಘಿಸಿಂಗ್ ಭೇಟಿ ಮಾಡಲು ಕಳಿಸಿತು. ಆಗ ಆದ ಒಪ್ಪಂದದ ಪ್ರಕಾರ ಘಿಸಿಂಗ್ ತಮ್ಮ ಅನುಯಾಯಿಗಳೊಂದಿಗೆ ಜುಲೈ 22 ರಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಗೋರ್ಖಾಲ್ಯಾಂಡ್ ವಿಚಾರ ಮಾತು ಕತೆಗೆ ಏರ್ಪಾಡು ಮಾಡಲಾಗಿದೆ. ಪಶ್ಚಿಮ ಬಂಗಾಳದ ಅಖಂಡತೆಗೆ ಸಂಚಕಾರ ತರುವ ಯಾವುದೇ ಕ್ರಮ ಮಾತುಕತೆಯ ಅಳವಿಗೆ ಬರುವುದಿಲ್ಲ ಎಂಬುದು ಒಪ್ಪಂದದ ಭಾಗ. ಸಿ.ಪಿ.ಐ.(ಎಂ) ಹಿಂದಿನಿಂದ ಒತ್ತಾಯಿಸುತ್ತಾ ಬಂದಿರುವ ಹಾಗೆ, ಡಾರ್ಜಿಲಿಂಗ್ ಮೂರು ಗುಡ್ಡಗಾಡಿನ ಸಬ್-ಡಿವಿಜನ್‌ಗಳಿಗೆ ಸ್ವಾಯತ್ತತೆ ಮತ್ತು ನೇಪಾಲಿ ಭಾಷೆಯನ್ನು ಸಂವಿಧಾನದ ಎಂಟನೇ ವಿಧಿಯಲ್ಲಿ ಸೇರಿಸುವುದರ ಆಧಾರದ ಮೇಲೆ ಪ್ರಜಾಸತ್ತಾತ್ಮಕಪರಿಹಾರ ದೊರಕುವುದೆಂದು ಹಾರೈಸಬೇಕಾಗಿದೆ.

○

ಸಂಕ್ಷಿಪ್ತ ಸುದ್ದಿಗಳು

ಕೇರಳದ ಮುಸ್ಲಿಂ ಲೀಗ್‌ನಲ್ಲಿ ಒಡಕು

ಮಾರ್ಚ್ ಚುನಾವಣೆಗಳಲ್ಲಿ ತನ್ನ ಸ್ಥಾನವನ್ನು ಗಿಡದುಕೊಂಡ ಏಕೈಕ ಯು.ಡಿ.ಎಫ್. ಘಟಕವಾದ ಮುಸ್ಲಿಂ ಲೀಗ್‌ನಲ್ಲೂ ಆಂತರಿಕ ಒಡಕುಗಳು ಕಂಡು ಬರುತ್ತದೆ. ಎರಡು ದಶಕಗಳ ಕಾಲ ಸತತವಾಗಿ ಮಂತ್ರಿಮಂಡಲದಲ್ಲಿದ್ದಾಗ ಹತ್ತಿಕಲ್ಪಟ್ಟದ್ದ ಅಸಂತುಷ್ಟಿ ಈಗ ಹೊರಹೊಮ್ಮುತ್ತಿರುವಂತೆ ಕಾಣುತ್ತದೆ. ಇತ್ತೀಚೆಗೆ ಲೀಗ್‌ನಿಂದ ಅಮಾನತು ಗೊಳಿಸಲ್ಪಟ್ಟ ದಕ್ಷಿಣ ಕೇರಳದ ಕೆಲವು ಪ್ರಮುಖ ಮುಖಂಡರುಗಳು ಲೀಗ್‌ಗೆ ರಾಜೀನಾಮೆ ನೀಡುತ್ತಾ ತಾವು ಒಂದು ಪ್ರತ್ಯೇಕ ಜಾತ್ಯಾತೀತ ಪಕ್ಷವನ್ನು ಕಟ್ಟುವೆವು ಅಥವಾ ಜಾತ್ಯಾತೀತ ಪಕ್ಷವೊಂದನ್ನು ಸೇರುವೆವು ಎಂದು ಘೋಷಿಸಿದ್ದಾರೆ. ಅತ್ತ ಲೀಗ್‌ನ ಪ್ರಭಾವಿ ಸ್ಥಾನವಾದ ಉತ್ತರ ಕೇರಳದಲ್ಲೂ ಒಬ್ಬ ಪ್ರಮುಖ ಮುಖಂಡ ಹಾಗೂ ಮಾಜೀಎಂ.ಎಲ್.ಎ. ತನ್ನ ಸೋದರನ ಕಾಳಸಂತೆ ಕೆಲಸಗಳಿಗೆ ನೆರವಾಗಿದ್ದಾರೆಂಬ ಆಪಾದನೆ ಎದುರಿಸುತ್ತಿದ್ದಾರೆ. ಜೊತೆಗೆ ಆಲೆಪ್ಪಿಯಲ್ಲಿ ಕರುಣಾಕರನ್ ಸರ್ಕಾರ ಹಲವಾರು ಲೀಗ್ ಮುಖಂಡರ ಮೇಲೆ ಹಾಕಿದ್ದ ಕೇಸೊಂದನ್ನು ಈಗಿನ ಎಲ್.ಡಿ.ಎಫ್. ಸರ್ಕಾರ ವಾಪಾಸು ಪಡೆದಿರುವುದು ಹಾಗೂ ರಾಷ್ಟ್ರಪತಿ ಚುನಾವಣೆಗಳಲ್ಲಿ ಮುಸ್ಲಿಂ ಲೀಗ್ ಅಖಿಲ ಭಾರತ ಮಟ್ಟದಲ್ಲಿ ವಿರೋಧಿ ಅಭ್ಯರ್ಥಿಗೆ ಬೆಂಬಲ ನೀಡುತ್ತಿರುವಾಗ ಕೇರಳದ ಘಟಕ ಯು.ಡಿ.ಎಫ್.ಗೆ ಬದ್ಧವಾಗಿ ತದ್ವಿರುದ್ಧ ನಿಲುವು ತಳೆಯಬೇಕಾಗಿರುವುದು ಪಕ್ಷದೊಳಗೆ ಇನ್ನಷ್ಟು ಗಲಿಬಿಲಿ ಉಂಟು ಮಾಡಿದೆ. ●

ಆಂಧ್ರ ಪ್ರದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ತೀವ್ರ ಚಳುವಳಿ

ಇತ್ತೀಚೆಗೆ ದೇಶದ ಜನತೆಯನ್ನು ದಂಗು ಬಡಿಸಿದ ಬೋಫೋರ್ಸ್ ಹಗರಣ ಮತ್ತು ರಕ್ಷಣಾ ಖಾತೆಯ ವ್ಯವಹಾರದಲ್ಲಿ ಲಂಚ ನೀಡಲಾದುದರ ವಿರುದ್ಧ ಹಾಗೂ ಇಂತಹ ಭ್ರಷ್ಟಾಚಾರಕ್ಕೆ ಆಸ್ಪದ ನೀಡಿರುವ ಕೇಂದ್ರ ಸರಕಾರದ ಧೋರಣೆಗಳ ವಿರುದ್ಧ ಆಂಧ್ರ ಪ್ರದೇಶದಲ್ಲಿ ಸಿ.ಪಿ.ಐ (ಎಂ) ತೆಲುಗು ದೇಶಂ ಮತ್ತು ಜನತಾಪಕ್ಷಗಳು ಜಂಟಿಯಾಗಿ ಚಳುವಳಿ ನಡೆಸುತ್ತಿವೆ. ಕಳೆದ ತಿಂಗಳು ದೆಹಲಿಯಲ್ಲಿ ಸೇರಿದ್ದ ಸಮಾನ ಅಭಿಪ್ರಾಯವುಳ್ಳ ವಿರೋಧ ಪಕ್ಷಗಳ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಈ ಚಳುವಳಿಗಳನ್ನು ನಡೆಸಲಾಗುತ್ತಿದೆ. ಜೂನ್ 18 ರಂದು ಹೈದರಾಬಾದಿನಲ್ಲಿ ಮೂರು ಪಕ್ಷಗಳೂ ಭಾರಿ ಮೆರವಣಿಗೆ ನಡೆಸಿ ನಿಜಾಂ ಕಾಲೇಜು ಮೈದಾನದಲ್ಲಿ ಬೃಹತ್ ಸಭೆಯನ್ನು ಏರ್ಪಡಿಸಿದ್ದವು. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಮತ್ತು ಕಾ ಇ ಎಂ.ಎಸ್.ನಂಬೂದಿರಿಪಾಡರು ನೇತೃತ್ವ ವಹಿಸಿದ್ದ ಈ ಮೆರವಣಿಗೆಯಲ್ಲಿ ಆಂಧ್ರದ ಅನೇಕ ಸಚಿವರಲ್ಲದೆ ಜನತಾ ಪಕ್ಷದಮುಖಂಡರೂ ಭಾಗವಹಿಸಿದ್ದರು. ಮೆರವಣಿಗೆಯ ಮುಂಚೂಣಿಯಲ್ಲಿ ಬೊಫೋರ್ಸ್ ಹಗರಣ ಸಬ್‌ಮೇರೀನ್ ಹಗರಣ ಮತ್ತು ಸ್ವಿಸ್ ಬ್ಯಾಂಕುಗಳಲ್ಲಿ ಅಪಾರ ಮೊತ್ತದ ಹಣ ಜಮೆ ಮಾಡಿಕೊಂಡಿರುವವರ ಪ್ರತಿಕೃತಿಗಳನ್ನು ಕೊಂಡೊಯ್ಯಲಾಗಿತು. ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿರಾಮರಾವ್ ಅವರು ಈಅಪರಾಧಿಗಳಿಗೆ ಯಾವ ಶಿಕ್ಷೆ ವಿಧಿಸಬೇಕೆಂದು ಜನರನ್ನು ಕೇಳಿದರು. "ಅವರನ್ನು ಸುಟ್ಟುಹಾಕಿ" ಎಂದು ಸಹಸ್ರಾರು ಜನ ಒಕ್ಕೊರಲಿನಿಂದ ಕಿರಿಚಿತ್ತ ಮೇಲೆ ಪ್ರತಿಕೃತಿಗಳನ್ನು ದಹಿಸಲಾಯಿತು.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ (ಐ) ಪಕ್ಷವು ನಡೆಸಿದ ಇನ್ನೊಂದು ರ್‍ಯಾಲಿ ಮತ್ತು ಸಾರ್ವಜನಿಕ ಸಭೆಗೆ ಜನ ಸಪ್ಪೆ ಪ್ರತಿಕ್ರಿಯೆ ತೋರಿಸಿದರು.

ಕೇಂದ್ರ ಸರಕಾರ ಮತ್ತು ಆಳುವ ಪಕ್ಷದ ಮಟ್ಟದಲ್ಲಿ ತಾಂಡವಾಡುತ್ತಿರುವ ಭ್ರಷ್ಟಾಚಾರ, ಲಂಚ, ರುಷುವತ್ತು, ಮತ್ತು ಅಕ್ರಮ ಸಂಭಾವನೆ ಯಂತಹ ದುಷ್ಕೃತ್ಯಗಳ ವಿರುದ್ಧ ಜನಜಾಗ್ರತಿ ಮೂಡಿಸಲು ಸಿ.ಪಿ.ಐ.(ಎಂ) ತೆಲುಗು ದೇಶಂ ಮತ್ತು ಜನತಾಪಕ್ಷವು ಹಲವಾರು ಸಭೆ,ಮೆರವಣಿಗೆ ಮುಂತಾದವುಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

○

ಐಕ್ಯರಂಗಕ್ಕೆ

ಚಂದದಾರರಾಗಿರಿ

ವಾರ್ಷಿಕ	50 ರೂ.
ಅರ್ಧವಾರ್ಷಿಕ	25 ರೂ.

○

ಸಂಕ್ಷಿಪ್ತ ಸುದ್ದಿಗಳು

ದ. ಆಫ್ರಿಕಾ

ರೈಲ್ವೇ ಕಾರ್ಮಿಕರು ಮೂರು ತಿಂಗಳ ಭೀಕರ ಸೆಣಸಾಟದ ನಂತರ, ತಮ್ಮ ಬೇಡಿಕೆಗಳನ್ನು ಗಳಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಒಬ್ಬ ಕಾರ್ಮಿಕನ ಜತೆ ಸೌಹಾರ್ದ ವ್ಯಕ್ತಪಡಿಸಲು ಈ ಮುಷ್ಕರ ಆರಂಭವಾಯಿತು. ವರ್ಣದ್ವೇಷಿ ಸರ್ಕಾರ ತನ್ನ ಅಮಾನುಷ ದಮನ ಯಂತ್ರವನ್ನು ಕಾರ್ಮಿಕರ ಮೇಲೆ ಹರಿಯಬಿಟ್ಟಿತ್ತು. ಗೋಳೀಬಾರ್‌ನಲ್ಲಿ ಹನ್ನೊಂದು ಕಾರ್ಮಿಕರ ಕೊಲೆ, 16000 ಕಾರ್ಮಿಕರ ವಜಾ, ಮಾತುಕತೆ ಸಮಿತಿಯ ಎಲ್ಲಾ ಸದಸ್ಯರ ಬಂಧನ, ಯೂನಿಯನ್ ಮುಖ್ಯ ಕಛೇರಿಯ ಸ್ಫೋಟ ಇವು ಯಾವುದಕ್ಕೂ ಜಗ್ಗದ ಕಾರ್ಮಿಕರು ಕೊನೆಗೂ 16000 ಕಾರ್ಮಿಕರಿಗೆ ಅವರಿಗೆ ಕೆಲಸ ವಾಪಾಸು ದೊರೆಯುವುದೂ ಸೇರಿದಂತೆ ಇತರ ಹಲವು ಬೇಡಿಕೆಗಳನ್ನು ಸಾಧಿಸಿದ್ದಾರೆ.

ಜೂನ್ 16 ರಂದು ದಕ್ಷಿಣ ಆಫ್ರಿಕಾದಾದ್ಯಂತ ಹನ್ನೊಂದನೇ ಸೊವೆಟೋ ದಿನವನ್ನು ಮುಷ್ಕರ, ಪ್ರತಿಭಟನೆಗಳ ವ್ಯಾಪಕವಾಗಿ ಆಚರಿಸಲಾಯಿತು. 15 ಲಕ್ಷ ಕಾರ್ಮಿಕರು ಸರ್ಕಾರದ ಯಾವ ಬೆದರಿಕೆಗೂ ಸೊಪ್ಪು ಹಾಕದೆ ಮುಷ್ಕರ ನಡೆಸಿದರು.

ಇರಾನ್-ಕಾಂಟ್ರಾ ಗೇಟ್:

ಈ ಹಗರಣ ಬೆಳಕಿಗೆ ಬಂದ ಕೆಲವೇ ದಿನಗಳಲ್ಲಿ ಕೆಲಸದಿಂದ ವಜಾ ಮಾಡಲ್ಪಟ್ಟು ಈ ಬಗ್ಗೆ ಬಾಯಿ ಬಿಚ್ಚಲು ಹಿಂದೆ ನಿರಾಕರಿಸಿದ್ದ, ಆದರೆ ಈಗ ಕಾನೂನು ಕ್ರಮಗಳಿಂದ 'ಸೀಮಿತ' ವಿನಾಯ್ತಿಯ ಭರವಸೆ ಪಡೆದು ಅಮೆರಿಕನ್ ಸಂಸತ್ ಸಮಿತಿಯ ವಿಚಾರಣೆಯಲ್ಲಿ ಹಾಜರಾಗಲು ಒಪ್ಪಿರುವ ಶ್ವೇತ ಭವನದ ಮಾಜಿ ಸಹಾಯಕ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್‌ನಾರ್ಥ್ ಈಗ ಹೊರಗೆಡಹುತ್ತಿರುವ ಸಂಗತಿಗಳು ಅಮೆರಿಕನ್ ಆಳುವ ಉಚ್ಛ ವಲಯಗಳಲ್ಲಿನ ಇನ್ನಷ್ಟು ರಾಡಿಯನ್ನು ಪ್ರತಿ ದಿನ ಹೊರಗೆಳೆಯುತ್ತಿವೆ. ●

ಜಪಾನಿನಲ್ಲಿ ಪರಮಾಣು ಯುದ್ಧದ ವಿರುದ್ಧ ಅಂತರಾಷ್ಟ್ರೀಯ ಸಭೆ

ಜೂನ್ 15 ರಿಂದ ಮೂರು ದಿನಗಳ ಕಾಲ ಜಪಾನಿನ ಟೋಕಿಯೋದಲ್ಲಿ 30 ಕಮ್ಯೂನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ 39 ಪ್ರತಿನಿಧಿಗಳು ಭಾಗವಹಿಸಿದ್ದ ಒಂದು ಅಂತರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. 'ಪರಮಾಣು ಯುದ್ಧದ ತಡೆ ಹಾಗೂ ಪರಮಾಣು ಶಸ್ತ್ರಾಸ್ತ್ರಗಳ ನಿರ್ಮೂಲನದ ಹೋರಾಟ ಶಾಂತಿ ಜಗತ್ತಿನ ಪ್ರಜಾಪ್ರಭುತ್ವವಾದಿಶಕ್ತಿಗಳಸಮಾನಧ್ಯೇಯ' ಈ ಸಂಕಿರಣದ ವಿಷಯವಾಗಿತ್ತು. ಜಪಾನೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರಸಮಿತಿ ಇದನ್ನು ಏರ್ಪಡಿಸಿತ್ತು. ಸಿ.ಪಿ.ಐ.[ಎಂ] ಪರವಾಗಿ ಈ ಸಭೆಯಲ್ಲಿ ಕೇಂದ್ರ ಸಮಿತಿ ಸದಸ್ಯ ಕಾ॥ ಸೀತಾರಾಮ್ ಯೆಚೂರಿ ಭಾಗವಹಿಸಿದ್ದರು. ವಾಸ್ತವವಾಗಿ ಏಷ್ಯಾವನ್ನು ಈ ಸಭೆಯಲ್ಲಿ ಪ್ರತಿನಿಧಿಸಿದ ಪಕ್ಷಗಳು ಜಪಾನೀ ಕಮ್ಯೂನಿಸ್ಟ್ ಪಕ್ಷವನ್ನು ಬಿಟ್ಟರೆ ಸಿ.ಪಿ.ಐ(ಎಂ) ಮತ್ತು ವಿಯೆಟ್ನಾಂ ಕಮ್ಯೂನಿಸ್ಟ್ ಪಕ್ಷ ಮಾತ್ರ.

ಸಂಕಿರಣದ ಆರಂಭ ಭಾಷಣ ಮಾಡಿದ ಜಪಾನೀ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಅಧ್ಯಕ್ಷ ಕೆಂಜಿಮಿಯಾಮೋಟೋ 1985 ರಲ್ಲಿ ಈ ರೀತಿಯ ಅಂತರಾಷ್ಟ್ರೀಯವಿಚಾರ ಸಂಕಿರಣದ ನಂತರದಬೆಳವಣಿಗೆಗಳನ್ನು ಪರಾಮರ್ಶಿಸಿ ಶಾಂತಿ ಪರಶಕ್ತಿಗಳ ಬಲ ಸಂವರ್ಧಿಸಿಯಾಗಿದೆ. ಎಂದು ಹೇಳಿ ಕಮ್ಯೂನಿಸ್ಟರು ಪರಮಾಣು ಅಸ್ತ್ರಗಳ ವಿರುದ್ಧ ಒಂದು ಅಂತರಾಷ್ಟ್ರೀಯರಂಗ ರಚಿಸುವಲ್ಲಿ ಇನ್ನೂ ಹೆಚ್ಚಿನ ಪಾತ್ರ ವಹಿಸಲು ಸಾಧ್ಯ ಮಾತ್ರವಲ್ಲ ವಹಿಸಲೇಬೇಕು ಎಂದರು.

"ಮಾನವನ ತಂತ್ರಜ್ಞಾನ ಸೃಷ್ಟಿಸಿದ ಶಸ್ತ್ರಗಳನ್ನು ಒಂದು ಭಯಾನಕ ಪ್ರಳಯಕ್ಕೆ ಬಳಸುವ ಕ್ರಿಮಿನಲ್ ಅಸಂಬದ್ಧತೆಯನ್ನು ತಿರಸ್ಕರಿಸುವಂತೆ ಮಾಡುವುದು ನಮ್ಮ ಮೇಲಿರುವ ಹೊಣೆ. ತರ್ಕ ಮತ್ತು ಬುದ್ಧಿಮತ್ತೆಯನ್ನು ಉಪಯೋಗಿಸಿ ತಮ್ಮ ಪರಮಾಣು ಅಸ್ತ್ರಗಳನ್ನು ಬಿಡಲೊಲ್ಲದ ಶಕ್ತಿಗಳಿಗೆ ಮುತ್ತಿಗೆ ಹಾಕಿ ಜನಗಳ ಸ್ವಾಭಾವಿಕ ಆಕ್ರೋಶ್ರಗಳು ಜಯಶಾಲಿಯಾಗುವಂತೆ ಮಾಡಬೇಕಾಗಿದೆ. ಇದು ಸಾಧ್ಯ ಎಂಬುದನ್ನು ಕಳೆದೆರಡು ವರ್ಷಗಳ ಘಟನೆಗಳು ತೋರಿಸಿಕೊಟ್ಟಿವೆ" ಎಂದು ಅವರು ಹೇಳಿದರು.

○

REG No. BGW-148 MAG (2) PRB DECR 319/78-79

ಸೆಪ್ಟೆಂಬರ್‌ನಲ್ಲಿ ಪಿಕೆಟಿಂಗ್‌ಗಾಗಿ ಭಾರತದ ಸಿದ್ಧತೆ

ಅಖಿಲ ಭಾರತ ಕಿಸಾನ್ ಸಭಾ ಮಂಡಳಿಯ ಕರೆಯಂತೆ ಸೆಪ್ಟೆಂಬರ್‌ನಲ್ಲಿ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಪಿಕೆಟಿಂಗ್ ನಡೆಸಲು ರಾಜ್ಯಾದ್ಯಾಂತ ಭರದಿಂದ ಸಿದ್ಧತೆಗಳು ನಡೆಯುತ್ತಿವೆ.

ರಾಜ್ಯ ಸಮಿತಿಯ ಸಭೆಯಲ್ಲಿ ಕಾ|| ಶಂಕರಯ್ಯ ಭಾಗವಹಿಸಿ ಕರೆ ನೀಡಿದ ನಂತರ ಜಿಲ್ಲಾ ಘಟಕಗಳು ಸಭೆ ಸೇರಿ ಸಮಾವೇಶ, ಜಾತಾಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ತಾಲ್ಲೂಕು ಸಮಿತಿಗಳ ವಿಸ್ತೃತ ಸಭೆಗಳು ನಡೆಯುತ್ತಿರುವುದರ ವಿವರಗಳು ಬರುತ್ತಿವೆ.

ರಾಯಚೂರು, ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳು

ರಾಯಚೂರು, ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳ ಪ್ರಾಂತ ರೈತ ಸಂಘದ ಘಟಕಗಳ ಪದಾಧಿಕಾರಿಗಳು ಗುಲ್ಬರ್ಗಾದಲ್ಲಿ ಸಭೆ ಸೇರಿ ಕೃಷ್ಣಾ ಮೇಲ್ದಂಡೆ ಯೋಜನೆಯ ಉಳಿದ ಹಂತಗಳನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸಲು ಜಾಥಾ ಕಾರ್ಯಕ್ರಮವನ್ನು ಯೋಜಿಸಿದ್ದಾರೆ.

ಬಿಜಾಪುರ ಜಿಲ್ಲೆಯಲ್ಲಿ ಜುಲೈ 16,17 ರಂದು 12ಬೇಡಿಕೆಗಳನ್ನು ಒತ್ತಾಯಿಲು ಜಿಲ್ಲಾ ಸಮಾವೇಶ ನಡೆಯುತ್ತಿದೆ.

ಬೆಂಗಳೂರು ಜಿಲ್ಲೆ

ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿ ದಿನಾಂಕ 4-7-87 ರಂದು ಕಾ|| ನಾಗಮೋಹನದಾಸ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬೆಂಗಳೂರು ಜಿಲ್ಲೆಯ ಮೂರು ತಾಲ್ಲೂಕು ಕೇಂದ್ರಗಳಲ್ಲಿ ಪಿಕೆಟಿಂಗ್ ಕಾರ್ಯಕ್ರಮ ನಡೆಸಬೇಕೆಂದು ತೀರ್ಮಾನಿಸಿತು. ಸಭೆಗಳನ್ನು ನಡೆಸಲು ತೀರ್ಮಾನಿಸಿತು. ನಾಲ್ಕು ತಾಲ್ಲೂಕುಗಳ ಸಮಿತಿಗಳು ವಿಸ್ತೃತ ಸಭೆಗಳನ್ನು ನಡೆಸಲು ತೀರ್ಮಾನಿಸಿತು. ಎರಡು ಹೋಬಳಿಗಳು ಒಟ್ಟಾಗಿ ಒಂದೊಂದು ಸೈಕಲ್ ಜಾಥಾ ಕಾರ್ಯಕ್ರಮ ಮಾಡುವಂತೆ ಒಟ್ಟು 5 ಜಾಥಾಗಳ ಕಾರ್ಯಕ್ರಮವನ್ನು ರೂಪಿಸಲಾಯಿತು. ಎಲ್ಲಾ ತಾಲ್ಲೂಕು ಹಾಗೂ ಹೋಬಳಿ ಮಟ್ಟದ ಸಭೆಗಳ ನಂತರ ಆಗಸ್ಟ್ ಮೊದಲ ವಾರದಲ್ಲಿ ಜಿಲ್ಲಾ ಮಟ್ಟದ ಸಮಾವೇಶವನ್ನು ನಡೆಸಲು ತೀರ್ಮಾನಿಸಲಾಯಿತು.

ಈ ತೀರ್ಮಾನದಂತೆ ಬೆಂಗಳೂರು ದಕ್ಷಿಣತಾಲ್ಲೂಕು ಸಮಿತಿಯ ವಿಸ್ತೃತ ಸಭೆ ಇತ್ತೀಚೆಗೆ ದಿನಾಂಕ 13-7-87 ರಂದು ಕಬ್ಬನ್ ಪಾರ್ಕ್‌ನಲ್ಲಿ ಕಾ|| ಶಾಮಣ್ಣ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿ ದಕ್ಷಿಣ ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆಗಳನ್ನು ನಡೆಸಲು ವೇಳಾಪಟ್ಟಿಯನ್ನು ನಿರ್ಧರಿಸಿತು. 50ಜನ ಸೇರಿದ್ದ ಈ ಸಭೆಯಲ್ಲಿ ಅಖಿಲ ಭಾರತ ಕಿಸಾನ್ ಸಭೆಯ ಕರೆಯನ್ನು ರಾಜ್ಯ ಖಜಾಂಚಿ ಪಿ. ಜಗನ್ನಾಥ್ ವಿವರಿಸಿದರು. ಲಕ್ಕಣ್ಣ ಜಿಲ್ಲಾ ಮಟ್ಟದ ಸಮಾವೇಶ ದ. ತಾಲ್ಲೂಕಿನಲ್ಲಿ ಕೈಗೊಳ್ಳಬೇಕೆಂದಿರುವ ಸಿದ್ಧತಾ ಕ್ರಮಗಳ ಬಗ್ಗೆ ಕಾ| ನಾಗರಾಜ್ ಅಖಿಲ ಭಾರತ ಕಾರ್ಯಕ್ರಮದ 12ಬೇಡಿಕೆಗಳ ಬಗ್ಗೆ ವಿವರಿಸಿದರು.

ದ. ಕ. ಜಿಲ್ಲೆ

ದೇಶದಲ್ಲಿ ಅಸಂಖ್ಯಾತ ರೈತರ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾ ನೀಡಿದ ಕರೆಯಂತೆ ದಿನಾಂಕ 7 9 87 ರಂದು 21ಬೇಡಿಕೆಗಳ ಈಡೇರಿಕೆಗೆ ಒಂದುವಾರದ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಕರೆ ನೀಡಲಾಗಿದ್ದು ರೈತರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿ ಉಡುಪಿ ತಾಲೂಕಿನಲ್ಲಿ ಸೆಪ್ಟೆಂಬರ್ 9ರಂದು ಪಿಕೆಟಿಂಗ್ ನಡೆಸಬೇಕೆಂಬ ನಿರ್ಣಯವನ್ನು ದಿನಾಂಕ. 9.7.87ರಂದು ಉಡುಪಿ ತಾಲೂಕು ರೈತ ಸಂಘದ ವಿಸ್ತೃತ ಸಭೆಯು ಕೈಗೊಂಡಿತು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ.ಅಬ್ರಹಾಂ ಕರ್ಕಡ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು.

ಪ್ರಾರಂಭದಲ್ಲಿ, ಪಂಜಾಬ್ ಮತ್ತು ಹರ್‍ಯಾಣಗಳಲ್ಲಿ ಬಸ್ ಮತ್ತು ಪಂಜಾಬಿನ ಕೃಷಿ ಕಾರ್ಮಿಕರ ಮುಂದಾಳು ದೀಪಕ್ ಧಾವನ್, ಗುರುಸಿಂಗ್ ಮೊದಲಾದವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ತಾಲೂಕು ಮಟ್ಟದ ಗ್ರಾಮಗಳಲ್ಲಿ ರೈತರ ಸಭೆಗಳನ್ನು ಜರಗಿಸುವ ಮೂಲಕವೂ ಕಾಲ್ನಡೆ ಜಾತಾಗಳ ಮೂಲಕವೂ ಪ್ರಚಾರ ಪಕ್ಷೋಭೆಗಳನ್ನು ಸಂಘಟಿಸುವ ನಿರ್ಧಾರ ಮಾಡಲಾಯಿತು. ಪ್ರಾರಂಭದಲ್ಲಿ ಕಾಂ ಡೆವಿಡ್ ಕರ್ಕಡ ಸ್ವಾಗತಿಸಿದರು.

ಬೆಳ್ತಂಗಡಿ

ತಾ| 10-7-87ರಂದು ಬೆಳ್ತಂಗಡಿಯಲ್ಲಿ ತಾಲ್ಲೂಕು ರೈತ ಸಂಘದ ಕಾರ್ಯಕಾರೀ ಸಮಿತಿಯು ಅಧ್ಯಕ್ಷ ಕಾ||ವಿ.ಪಿ. ಮಥಾಯಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸೆಪ್ಟಂಬರ್‌ನ ಎ ಐ ಕೆ ಎಸ್. ಚಳುವಳಿಯನ್ನು ತಾಲ್ಲೂಕಿನಲ್ಲಿ ಪರಿಣಾಮಕಾರಿಯಾಗಿ ಜ್ಯಾರಿಗೊಳಿಸಲು ಹಲವಾರು ತೀರ್ಮಾನಗಳನ್ನು ಕೈಗೊಂಡಿತು.

ಆರಂಭದಲ್ಲಿ ಬೇಡಿಕೆಗಳ ಬಗ್ಗೆ ಮತ್ತು ಅಖಿಲ ಭಾರತ ಮಟ್ಟದ ಇತ್ತೀಚಿನ ಬೃಹತ್ ಚಳುವಳಿಯ ಬಗ್ಗೆ ತಾಲ್ಲೂಕು ಕಾರ್ಯದರ್ಶಿ ಕಾ|| ವಿಷ್ಣುಮೂರ್ತಿ ವಿವರಣೆ ನೀಡಿದರು.

ಐನೂರು ಬ್ಯಾಜ್‌ಗಳ ಮಾರಾಟ, 10ಪ್ರಚಾರ ಜಾಥಗಳು, 16ಕಡೆ ಗ್ರಾಮ ಸಭೆಗಳು, ಆಗಸ್ಟ್‌ಒಂದರಂದು ಜಾಥಗಳಲ್ಲಿ ಭಾಗವಹಿಸುವ ಸ್ವಯಂ ಸೇವಕರಿಗೆ ತರಬೇತಿ ಶಿಬಿರವನ್ನು ನಡೆಸುವುದು ಮುಂತಾದ ಕಾರ್ಯಕ್ರಮಗಳನ್ನು ಚರ್ಚಿಸಿ ರೂಪೀಕರಿಸಲಾಯಿತು.

ಚರ್ಚೆಯಲ್ಲಿ ಸಂಗಾತಿಗಳಾದ ಅಣ್ಣುಗೌಡ, ಲಕ್ಷ್ಮಣ ಗೌಡ,ಎಂ.ಕೆ. ದೇವಾನಂದ್, ಆನಂದ ರೈ, ಕರಿಯನಲಿಕೆ, ಎಂ.ಎ. ಥೋಮಸ್, ಪರಮೇಶ್ವರ, ಬಾಬು ಗೌಡ, ವಸಂತ ಭಟ್, ಕೂಸಪ್ಪ ಗೌಡ, ಬೋಬಿ ಪೂಜಾರಿ ಮೊದಲಾದವರು ಭಾಗವಹಿಸಿದರು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡರು ಸಭೆಯಲ್ಲಿ ಉಪಸ್ಥಿತರಿದ್ದು ಸೂಕ್ತ ಮಾರ್ಗದರ್ಶನ ನೀಡಿದರು. ಕೊನೆಯಲ್ಲಿ ತಾಲ್ಲೂಕು ಸಮಿತಿ ಉಪಾಧ್ಯಕ್ಷ ಕಾ|| ಪರಮೇಶ್ವರ ಧನ್ಯವಾದವಿತ್ತು ಸ್ಫೂರ್ತಿದಾಯಕವಾಗಿ ಸಭೆ ಮುಕ್ತಾಯಗೊಂಡಿತು. ●

ಈ ವಾರ....

★ ಮಾನವ ಕುಲಕ್ಕೆ ನೇರವಾಗಿ ಯಾವ ಪ್ರಯೋಜನವನ್ನು ನೀಡದ ಸೈನಿಕಶಸ್ತ್ರಾಗಾರಗಳಿಗೆ ವ್ಯರ್ಥಗೊಳಿಸದಿದ್ದರೆ ವಿಶ್ವದ ಸಂಪನ್ಮೂಲಗಳಿಂದ 500 ಕೋಟಿ ಜನರನ್ನೂ ಸಾಕಲು ಸಾಧ್ಯವಿದೆ ಎಂದು ಜಾಂಬಿಯಾ ಅಧ್ಯಕ್ಷ ಕೆನೆತ್ ಕೌಂಡಾ ಹೇಳಿದ್ದಾರೆ.

ಝೂನಾ ಪೂಲ್ ಸುದ್ದಿ, ಜುಲೈ 13.

★ ಆರಿಫ್ ಮುಹಮ್ಮದ್ ಖಾನ್,ಅರುಣ್ ನೆಹರೂ ಹಾಗೂ ವಿ.ಸಿ. ಶುಕ್ಲಾರ ಉಚ್ಚಾಟನೆ ಪ್ರಜಾಪ್ರಭುತ್ವ-ವಿರೋಧಿ ಮತ್ತು ಸರ್ವಾಧಿಕಾರೀ ಕ್ರಮ....ಜನತೆಗೆ ಮತ್ತು ಹಲವು ಕಾಂಗ್ರೆಸ್ ಕಾರ್ಯಕರ್ತರಿಗೆ ನಮ್ಮ ಕೆಲವರ ವಿದೇಶೀ ಆಸ್ತಿಬಗ್ಗೆ ಪ್ರಾಮಾಣಿಕ ಸಂದೇಹಗಳಿವೆ. ಇದಕ್ಕಾಗಿ ಪಕ್ಷ ಭಾರೀ ರಾಜಕೀಯ ಬೆಲೆ ತರಬೇಕಾಗಿ ಬಂದಿದೆ. ಅದನ್ನು ನಿವಾರಿಸಬೇಕಾಗಿದೆ. ಉಚ್ಚಾಟನೆಗಳು ಕಾರ್ಮೋಡಗಳನ್ನು ಚದುರಿಸಲಾರವು.

—ಪಕ್ಷದಿಂದ ರಾಜೀನಾಮೆಯ ಪ್ರಸ್ತಾಪ ಮಾಡಿದಪತ್ರದಲ್ಲಿ ಮಾಜಿ ಕೇಂದ್ರ ಮಂತ್ರಿ ವಿ.ಪಿ.ಸಿಂಗ್, ಜುಲೈ 16.

★ ಕಾಂಗ್ರೆಸ್ ಕಾರ್ಯಕರ್ತರೇ ಕೋಮು ಉದ್ವೇಗಕ್ಕೊಳಗಾದರೆ, ಕೋಮುವಾದದ ವಿರುದ್ಧ ದೃಢ ಕ್ರಮಕ್ಕೈಗೊಳ್ಳುವಲ್ಲಿ ಸರ್ಕಾರ ವಿಳಂಬ ನೀತಿ, ನಿರ್ಲಕ್ಷ್ಯ ತೋರಿದರೆ ರಾಷ್ಟ್ರೀಯ ಐಕ್ಯತೆಯನ್ನು ಎಷ್ಟರವರೆಗೆ ನಾವು ಉಳಿಸಿಕೊಳ್ಳಬಲ್ಲೆವು ?

—ಮಂತ್ರಿಪದವಿಗೆ ರಾಜೀನಾಮೆ ಪತ್ರದಲ್ಲಿ ಮುಫ್ತಿ ಮುಹಮ್ಮದ್ ಸೈಯೀದ್, ಜುಲೈ 14.

★ ಹರಿದ್ವಾರದಲ್ಲಿ ಕೇಂದ್ರ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಾ ಶ್ರೀ ವಿ.ಪಿ.ಸಿಂಗ್ ಗುತ್ತೆದಾರಿ ಹಾಗೂ ಖಾಸಗೀ ಬಂಡವಾಳಶಾಹಿಗಳ ಶೋಷಣೆಯ ವಿರುದ್ಧ ಹೋರಾಟದಲ್ಲಿ ಮತ್ತು ವಿದೇಶಿ ತಂತ್ರಜ್ಞಾನದ ಅನಗತ್ಯ ಬಳಕೆಯ ವಿರುದ್ಧ ರಕ್ಷಣಾ ಗೋಡೆಯಾಗಿ ಸಾರ್ವಜನಿಕ ವಲಯದ ಪಾತ್ರವನ್ನು ವಿವರಿಸಿದರು. ಆದರೆ ಕಳೆದ ಕೆಲವು ತಿಂಗಳ ಅವರ ಭಾಷಣಗಳಲ್ಲಾಗಲೀ, ಪ್ರಧಾನಮಂತ್ರಿಗೆ ಬರೆದ ಪತ್ರದಲಾಗಲೀ ಇದರ ಪ್ರಸ್ತಾಪ ಕಂಡು ಬರುತ್ತಿಲ್ಲ.

ಡೆಕ್ಕನ್ ಹೆರಾಲ್ಡ್, ಜುಲೈ 17.

★ ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಗಾಬರಿ ಹುಟ್ಟಿಸುವಂತಿದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಹುದ್ದೆಗಳು ಖಾಲಿಯಿದೆ. ಮುಂದಿನ ವರ್ಷ ನಿವೃತ್ತರಾಗಲಿರುವವರನ್ನೂ ಸೇರಿಸಿದರೆ ಈಗ ಒಟ್ಟು ಭರ್ತಿಯಾಗಬೇಕಾದ ಹುದ್ದೆಗಳ ಸಂಖ್ಯೆ 2800.

ಪ್ರಜಾವಾಣಿ, ಜುಲೈ 11.

ತಡವಾಗಿ ಎಚ್ಚರಗೊಳ್ಳುತ್ತಿರುವ ಮಂತ್ರಿಗಳು

(1ನೇ ಪುಟದಿಂದ)

ಆಸಿನರಾಗಿ "ನಮಗೆ ಕೈ ಹಚ್ಚುವ ತಾಕತ್ತು ಯಾರಿಗಿದೆ" ಎಂದು ಜಂಭ ಕೊಚ್ಚಿಕೊಳ್ಳುತ್ತಾರೆ. ರಾಮಕೃಷ್ಣ ಹೆಗಡೆಯವರಿಗೆ ಇದು ಗೊತ್ತಿಲ್ಲವಿಲ್ಲ.

ನೌಕರದಾರರ ಮೇಲೆಭ್ರಷ್ಟಾಚಾರದ ಆರೋಪ ಹೊರಿಸುವ ಮುಖ್ಯಮಂತ್ರಿಯವರು ತನ್ನಿಂದಲೂ ಕೂಡ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುವ ಕೃತಿಗಳಾಗುತ್ತಿದೆಯೇ ಎಂಬುದನ್ನು ಪರಾಮರ್ಶಿಸಿಕೊಳ್ಳಬೇಕು.

ಸಿ.ಪಿ.ಐ.(ಎಂ) ಮುಖಂಡತ್ವದ ಪಶ್ಚಿಮ ಬಂಗಾಳ-ತ್ರಿಪುರ ಎಡರಂಗ ಸರ್ಕಾರಗಳು ಭ್ರಷ್ಟಾಚಾರ ತಡೆಗಟ್ಟಲು ಕ್ರಮ ಕೈಗೊಂಡಿವೆ. ಯಶಸ್ವಿ ಪಡೆದಿವೆ. ಪ. ಬಂಗಾಳದಲ್ಲಿ ಪಂಚಾಯತುಗಳಿಗೆ ಆರಿಸಿ ಹೋದ ಪಕ್ಷದ ಸದಸ್ಯರು ಭ್ರಷ್ಟಾಚಾರ-ಲಂಚದ, ಆರೋಪಕ್ಕೆಬಲಿಯಾಗದೆ ಅಂಥವರನ್ನು ಪಕ್ಷದಿಂದ ಹೊರಹಾಕಿ ಸಾರ್ವಜನಿಕವಾಗಿ ಅವರನ್ನು ಖಂಡಿಸಲಾಗುವುದು. ಆ ರೀತಿಯ ಕ್ರಮದಿಂದ ರಾಜಕೀಯ ಭ್ರಷ್ಟಾಚಾರಕ್ಕೆ ತಡೆಯೊಡ್ಡಿದಂತಾಗಿದೆ.

ಮುಖ್ಯಮಂತ್ರಿಯವರು ಪತ್ರಮುಖೇನ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರೆ ಭ್ರಷ್ಟಾಚಾರ ನಿಲ್ಲುವುದಿಲ್ಲ.ಆಡಳಿತೆಯ ವೈಖರಿಯಲ್ಲಿಯೇ ಬದಲಾವಣೆಯಾಗಬೇಕಾಗಿದೆ. ●

ಬಿಜೆಪಿ ಬೊಬ್ಬೆ.

[1ನೇ ಪುಟದಿಂದ]

ಯಾರಿಗೂ ಆಶ್ಚರ್ಯವಾಗದು ಏಕೆಂದರೆ ಮುಸ್ಲಿಂ ವಿರೋಧಿ ಹಿಂದು ರಾಷ್ಟ್ರದ ತತ್ವವನ್ನು ಪ್ರತಿಪಾದಿಸುತ್ತಿರುವ ಆರೆಸ್ಸೆಸ್ ನಮ್ಮ ದೇಶದಲ್ಲಿ ಛಿದ್ರಕಾರಿ ಶಕ್ತಿಗಳ ಬೆಳವಣಿಗೆಗೆ ಮಣ್ಣನ್ನು ಉತ್ತು ಹದಮಾಡಿಕೊಡುವ ಅತ್ಯಂತ ಕ್ಷುದ್ರ, ಅತ್ಯಂತ ಹೆಚ್ಚು ಸಂಘಟಿತವಾದ ಶಕ್ತಿ. ಇದರ ಚಟುವಟಿಕೆಗಳ ವಿರುದ್ಧ ಎಡ ಹಾಗೂ ಇನ್ನಿತರ ಪ್ರಜಾಸತ್ತಾತ್ಮಕ ಶಕ್ತಿಗಳು ದೃಢ ನಿರ್ಧಾರದ ಹೋರಾಟವನ್ನು ಸಾಗಿಸುತ್ತಿವೆ. ಹೊರದೇಶಗಳಲ್ಲಿರುವ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಈ ಹೋರಾಟಕ್ಕೆ ಸಂಪೂರ್ಣ ಸಹಾನುಭೂತಿ ತೋರಿಸುತ್ತಿವೆ.

ಈ ಸಹಾನುಭೂತಿ,ಆತಂಕ ವ್ಯಕ್ತಪಡಿಸುವುದೆಂದರೆ ಭಾರತದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವುದು ಎಂದರ್ಥವಲ್ಲ. ಏಕೆಂದರೆ ಹಿಂದು ರಾಷ್ಟ್ರದಂತಹ ತತ್ವಗಳ ವಿರುದ್ಧ ಜಾತ್ಯಾತೀತ, ಪ್ರಜಾಸತ್ತಾತ್ಮಕ ಭಾರತವನ್ನು ನಿರ್ಮಿಸುವ ನಮ್ಮ ಹೋರಾಟ ವಿಶ್ವದ ಎಲ್ಲಾ ಕಡೆಯ ಪ್ರಗತಿಪರ ಜನವಾದಿಗಳಿಗೆ ಜೀವಂತ ಸಕ್ರಿಯ ಆಸಕ್ತಿ ಇರುವ ಹೋರಾಟ.

ಭಾರತ ಹಾಗೂ ಸೋವಿಯೆತ್ ಒಕ್ಕೂಟದ ನಡುವೆ ಎಲ್ಲಾ ಸಮಾಜವಾದಿ ದೇಶಗಳು ಹಾಗೂ ಅಲಿಪ್ತ ರಾಷ್ಟ್ರಗಳ ನಡುವೆ ಸ್ನೇಹಸಹಕಾರ ಇಬ್ಬರಿಗೂ ಸಮಾನ ಆಸಕ್ತಿಯದು ಹಾಗೂ ಸಾಮ್ರಾಜ್ಯಶಾಹಿಗಳಿಗೇ ವಿರುದ್ಧವಾದದ್ದು.

ಯಾರು ಭಾರತವನ್ನು ಸಾಮ್ರಾಜ್ಯಶಾಹಿಗಳ ಬಾಲ ಬಡುಕರ ರಾಷ್ಟ್ರವನ್ನಾಗಿ ಪರಿವರ್ತಿಸಲು ಇಷ್ಟಪಡುತ್ತಾರೊ ಅವರು ಮಾತ್ರ ಭಾರತ ಸೋವಿಯೆತ್ ಮೈತ್ರಿಗೆ ಆತಂಕ ಒಡ್ಡುತ್ತಾರೆ. ●

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Slutanpet B-53 Phone : 75331
Editorial and Managerial Office : L-56, K. V. Temple Street,
Editor P· RamachandraRao
Managing Editor : N. K. Upadhyaya